**ಶ್ರೀಃ**

**ಶ್ರೀ ಮತೇ ರಾಮಾನುಜಾಯ ನಮಃ**

**ಉಚಿತ ವಿತರಣೆ**

# ಶ್ರೀವೈಷ್ಣವ ಸಂಪ್ರದಾಯದಲ್ಲಿ ಆಚರಿಸುವ ಜಾತಾಶೌಚ ಮತ್ತು ಮೃತಾಶೌಚಗಳ ವಿಷಯ

ಸೂರ್ಯ ಸಿದ್ಧಾಂತ ಮತ್ತು ವಾಕ್ಯ ಪಂಚಾಂಗ ಮತ್ತು ಶ್ರೀವೈಷ್ಣವ ಆಚರಣೆ ಕೈಪಿಡಿಯನ್ನು ಕಳೆದ 10 ವರ್ಷಗಳಿಂದ ಶ್ರೀವೈಷ್ಣವರ ಉಪಯೋಗಕ್ಕಾಗಿ ರಚಿಸಿ ಸಮರ್ಪಿಸುತ್ತಿದ್ದೇನೆ. ಇದನ್ನು ತಾವೆಲ್ಲರೂ ಸಹೃದಯದಿಂದ ಸ್ವೀಕರಿಸಿ ಉಪಯೋಗಿಸುತ್ತಿರುವಿರೆಂದು ನಂಬಿದ್ದೇನೆ. ಈ ಪ್ರಯತ್ನದಲ್ಲಿ ಉಪಯುಕ್ತ ಸಲಹೆಗಳನ್ನು ಸ್ವೀಕರಿಸಲು ಸಿದ್ಧನಿದ್ದೇನೆ.

ಅದೇ ರೀತಿ ಶ್ರೀವೈಷ್ಣವ ಸಂಪ್ರದಾಯದಲ್ಲಿ ಆಚರಿಸುವ ಜಾತಾಶೌಚ(ಮಗುವ ಹುಟ್ಟಿನಿಂದ ಬರುವ ಸೂತಕ) ಮತ್ತುಮೃತಾಶೌಚ(ಮರಣದಿಂದ ಬರುವ ಸೂತಕ) ಬಗ್ಗೆಯೂ ಸುಲಭವಾಗಿ ತಿಳಿಯಲೂ ಒಂದು ಕಿರು ಪುಸ್ತಕವನ್ನು ರಚಿಸಲು ಪ್ರಯತ್ನಮಾಡಿರುತ್ತೇನೆ. ಇದನ್ನು ಶ್ರೀವೈಷ್ಣವರೆಲ್ಲರೂ ಸದುಪಯೋಗಪಡಿಸಿಕೊಳ್ಳುವಿರೆಂದು ಭಾವಿಸಿದ್ದೇನೆ.

ಇದನ್ನು ಮುದ್ರಿಸಿ ಉಚಿತವಾಗಿ ವಿತರಿಸಲು ಧನಸಹಾಯ ಮಾಡಿರುವ ದಾನಿಗಳಿಗೆ ನಾನು ಕೃತಜ್ಞನಾಗಿದ್ದೇನೆ. ಇದನ್ನು ದಾಸನಾದ ನಾನೇ ಡಿ.ಟಿ.ಪಿ. ಮಾಡುವ ಪ್ರಯತ್ನವನ್ನೂ ಮಾಡಿರುತ್ತೇನೆ. ಈ ಪ್ರಯತ್ನದಲ್ಲಿ ನನಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಾಯ ಮಾಡಿರುವ ಎಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ಈ ಕೈಪಿಡಿಯನ್ನು ರಚಿಸುವಲ್ಲಿ ಕೆಲವು ಉಪಯುಕ್ತ ಸಲಹೆಗಳನ್ನು ನೀಡಿದ ವಿದ್ವಾನ್ ಉ.ವೇ. ಶ್ರೀ.ಎಂ.ಕೇ.ಶ್ರೀನಿವಾಸ ಐಯ್ಯಂಗಾರ್, ಮೇಲುಕೋಟೆ. ಮತ್ತು ವಿದ್ವಾನ್ ಉ.ವೇ.ಶ್ರೀ.ಎಂ.ಕೇ.ರಾಮಸ್ವಾಮಿ ಐಯ್ಯಂಗಾರ್, ಮೇಲುಕೋಟೆ, ಇವರುಗಳಿಗೂ ನಾನು ಕೃತಜ್ಞನಾಗಿದ್ದೇನೆ. ಇವರೆಲ್ಲರಿಗೂ ನನ್ನ ವಂದನೆಗಳು.

ಇದರಲ್ಲಿ ಸಂದೇಹಗಳೇನಾದರೂ ಇದ್ದಲ್ಲಿ ನನ್ನ ದೂರವಾಣಿ ಸಂಖ್ಯೆಗಳು 09986057991; 09341392792; 06360924868; 9164154798 ಇವುಗಳಲ್ಲಿ ಅಥವಾ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಲು ಕೋರಿದೆ.

**ಪರಿಷ್ಕೃತ ಮುದ್ರಣ ಏಪ್ರಿಲ್ 2020**

**ಇತಿ ಅಡಿಯೇನ್**
**ರಂಗರಾಜ ರಾಮಾನುಜ ದಾಸನ್**
**ವಿಳಾಸ: ಎಂ.ಡಿ.ರಂಗರಾಜನ್,**
**#256,ಕುಣಿಗಲ್ ಬೀದಿ,**
**ಮೇಲುಕೋಟೆ–571431, ಮಂಡ್ಯ ಜಿಲ್ಲೆ,**
**ಕರ್ನಾಟಕ.**

ಶ್ರೀಃ

ಶ್ರೀಮತೇ ರಾಮನುಜಾಯ ನಮಃ

## ಜಾತಾಶೌಚ ವಿಷಯ

## (ಮಗುವಿನ ಹುಟ್ಟಿನಿಂದ ಬರುವ ಆಶೌಚ)

ಮೂಲಪುರುಷನಿಂದ ಮೊದಲ ಏಳು ತಲೆಮಾರುವರೆಗೆ ಇರುವವರ ಗಂಡು ಸಂತಾನದವರಿಗೆ ಗಂಡು ಮಗುವುಹುಟ್ಟಿದರೆ 10 ದಿನ ಆಶೌಚ. ಎರಡನೆಯ ಏಳುತಲೆಮಾರಿನವರೆಗೆ ಇರುವ ಗಂಡು ಸಂತಾನದವರಿಗೆ ಗಂಡು ಮಗುವು ಹುಟ್ಟಿದರೆ 3 ದಿನ ಆಶೌಚ. ತಲೆಮಾರಿನ ಮೂಲ ಪುರುಷನನ್ನು ಆಶೌಚ ಇರುವವರು ಮತ್ತು ಹುಟ್ಟಿದ ಮಗುವಿಗೂ ಸೇರಿಸಿನೋಡಬೇಕು. ಮೂಲ ಪುರುಷನು ಒಂದೊಂದು ತಲೆಮಾರಿಗೂ ವ್ಯತ್ಯಾಸವಾಗುವುದುಂಟು.

| | |
|---|---|
| ಮೂಲ ಪುರುಷ | ತನ್ನ(ಅನುಪನೀತ,ಗೃಹಸ್ಥ,ಅವನ ಹೆಂಡತಿ,ಅವಿವಾಹಿತೆ) |
| । | । |
| ಮೊಮ್ಮಗನ(ಮಗನ ಮಗ) | ತಾತನ(ತಂದೆಯ ತಂದೆ) |
| । | । |
| ಮೊಮ್ಮಗನ(ಮಗನ ಮಗ) | ತಾತನ(ತಂದೆಯ ತಂದೆ) |
| । | । |
| ಮೊಮ್ಮಗ(ಮಗನ ಮಗ/ಅವಿವಾಹಿತ ಮಗಳು) (ಅನುಪನೀತ,ಗೃಹಸ್ಥ, ಅವನ ಹೆಂಡತಿ,ಅವಿವಾಹಿತೆ) | ತಾತ(ತಂದೆಯ ತಂದೆ) |

ಹೆಣ್ಣು ಮಗುವು ಹುಟ್ಟಿದರೆ ಮೂರು ತಲೆಮಾರಿಗೆ ಅಂದರೆ ಹುಟ್ಟಿದ ಮಗುವಿನ ಒಡಹುಟ್ಟಿದವರಿಗೆ, ಮತ್ತು ಅದರತಂದೆಯ ಒಡಹುಟ್ಟಿದ ಗಂಡು ಸಂತಾನದವರು, ಅವರ ಹೆಂಡತಿಯರು ಮತ್ತು ಅವರ ಮದುವೆಯಾಗದ ಹೆಣ್ಣು ಮಕ್ಕಳು ಮದುವೆಯಗಿರುವಗಂಡಸು ಅವನ ಹೆಂಡತಿ ಅನುಪನೀತರು ಮತ್ತು ಆ ಮಗುವಿನ ತಾತನ ಒಡಹುಟ್ಟಿದ ಗಂಡುಸಂತಾನದವರು ಮತ್ತು ಅವರ ಹೆಂಡತಿಯರಿಗೆಮಾತ್ರ 10 ದಿನ ಆಶೌಚ. ಹೆಣ್ಣು ಮಗು ಹುಟ್ಟಿದಾಗ ಆ ಮಗುವಿನ ತಾತನ ಒಡಹುಟ್ಟಿದ ಗಂಡು ಸಂತಾನದವರ ಮಕ್ಕಳಿಗೆ ಆಶೌಚವಿಲ್ಲಾ.ಇದಲ್ಲದೆ ಮಗುವಿನ ತಾತನ ತಂದೆ, ತಾಯಿ ಮತ್ತು ತಾತನ ತಂದೆಯ ಸಹೋದರರು ಮತ್ತು ಅವರ ಹೆಂಡತಿಯರಿಗೂ ಆಶೌಚವಿಲ್ಲಾ.

ತನ್ನ(ಗಂಡ, ಹೆಂಡತಿ ಇಬ್ಬರಿಗೂ) ಮಗಳಿಗೆ ಗಂಡು ಸಂತಾನ ಜನನವಾದರೆ ಎಲ್ಲಾ ಮಕ್ಕಳಿಗೂ 3 ದಿನ ಆಶೌಚ. ಹೆಣ್ಣು ಸಂತಾನ ಜನನವಾದರೆ ಮೊದಲನೆಯ ಹೆಣ್ಣು ಸಂತಾನ ಜನನವಾದಾಗ ಮಾತ್ರ 3 ದಿನ ಆಶೌಚ. ಎರಡರಿಂದ ಮುಂದಿನ ಹೆಣ್ಣು ಮಕ್ಕಳ ಜನನದಲ್ಲಿ ಪ್ರಸವಕ್ಕೆ ದ್ರವ್ಯ ವ್ಯಯ ಮಾಡಿದಾಗ ಮಾತ್ರ 3 ದಿನ ಆಶೌಚ ಉಂಟು. ದ್ರವ್ಯ ವ್ಯಯ ಇಲ್ಲದಿದ್ದರೆ ಆಶೌಚ ಇಲ್ಲಾ ಎಂಬುದು ಸಂಪ್ರದಾಯದಲ್ಲಿದೆ.

ಜಾತಾಶೌಚವು 10 ದಿನಗಳದಾಗಲಿ ಅಥವಾ 3 ದಿನಗಳದಾಗಲಿ ಆ ದಿನಗಳ ರಾತ್ರಿಗಳು ಕಳೆದಮೇಲೆ ವಿಷಯ ತಿಳಿದರೆ ಆಶೌಚವಿಲ್ಲಾ.

ತನಗೆ ಹೆಣ್ಣು ಮಗುವಾಗಲಿ ಗಂಡು ಮಗುವಾಗಲಿ ಹುಟ್ಟಿದ 10ನೇ ದಿನ ಗರ್ಭದೀಕ್ಷೆ ಎಂಬುದನ್ನು ತೆಗೆಯಬೇಕು.(ಕ್ಷೌರ ಮಾಡಿಸಿಕೊಳ್ಳಬೇಕು). ತನ್ನ ಹೆಂಡತಿ ಗರ್ಭಿಣಿಯಾದ 7ನೇ ತಿಂಗಳಿನಿಂದ ದೀಕ್ಷೆಯಲ್ಲಿದ್ದು (ಕ್ಷೌರ ಮಾಡದೆ) ಮಗುವು ಹುಟ್ಟಿದ ಹತ್ತನೆಯ ದಿನ ದೀಕ್ಷೆ ತೆಗೆಯ ಬೇಕು(ಕ್ಷೌರ ಮಾಡಿಸಬೇಕು). ಆದಿನ ತಿಥಿ ನಕ್ಷತ್ರ ಯಾವುದನ್ನೂ ನೋಡದೆ ಕ್ಷೌರ ಮಾಡಿಸಬೇಕು ಅಂದರೆ ದೀಕ್ಷೆ ತೆಗೆಯ ಬೇಕು. ಇದಾದ ಮೇಲೆ 11ನೇ ದಿನ ಆಶೌಚ ನಿವೃತ್ತಿ. ಗರ್ಭ ದೀಕ್ಷೆಯಲ್ಲಿರುವಾಗ ಮತ್ತು ಮಗುವು ಹುಟ್ಟಿದ ಮೇಲೆ 30ದಿನ(ಗಂಡು ಮಗುವಿಗೂ) 40ದಿನ(ಹೆಣ್ಣು ಮಗುವಿಗೂ)ವರೆಗೆ ನಿಮಂತ್ರಣ(ಬ್ರಾಹ್ಮಣಾರ್ಥ) ಇರುವುದು ಕೂಡದು.

ತನ್ನ ತಂದೆ ಅಥವಾ ತಾಯಿ ಅಥವಾ ಬೇರೆಯವರ ಶಾಸ್ತ್ರ ಸಮ್ಮತವಾದ ಕರ್ತೃತ್ವದ ಮರಣ ನಿಮಿತ್ತ ದೀಕ್ಷೆಯಲ್ಲಿರುವಾಗ ತನಗೆ ಮಗು ಹುಟ್ಟಿದರೆ 10ನೇ ದಿನ ಕ್ಷೌರ ಮಾಡಿಸಿಕೊಂಡು ಗರ್ಭದೀಕ್ಷೆಯನ್ನು ಕಳೆದು ಮತ್ತೆ ಮರಣದ ನಿಮಿತ್ತ ಬಿಟ್ಟಿದ್ದ ದೀಕ್ಷೆಯನ್ನು ನಿಯಮಿತ ಕಾಲದವರೆಗೆ ಮುಂದುವರೆಸಬೇಕು.

**ದೀಕ್ಷೆಯ ಅವಧಿ:** ತಂದೆ ಮತ್ತು ತಾಯಿ– 1ವರ್ಷ.

ಅಣ್ಣ, ಚಿಕ್ಕಪ್ಪ, ದೊಡ್ಡಪ್ಪ(ತಂದೆಯ ಸಹೋದರರು), ಮಾತಾಮಹ, ಮಾತಾಮಹಿ, ಸೋದರಮಾವ– 6 ತಿಂಗಳು. 6 ತಿಂಗಳ ನಂತರ ದೀಕ್ಷೆ ತೆಗೆದರೂ ವರ್ಷಾಂತ್ಯದವರೆಗೆ ಉಳಿದ ನಿಯಮಗಳಾದ ನಿಮಂತ್ರಣ(ಬ್ರಾಹ್ಮಣಾರ್ಥ) ಇಲ್ಲದಿರುವುದು, ಮಾಸಿಕ ನಡೆಸುವುದು ಮುಂತಾದ ನಿಯಮಗಳು ಅನ್ವಯಿಸುವುದು.

ತನಗೆ ಮಗುವು ಹುಟ್ಟಿದ ವಿಷಯ ತಿಳಿದ ತಕ್ಷಣ ತಂದೆಯಾದವನು ಸ್ನಾನ ಮಾಡಬೇಕು. ಕೆರೆ, ಕೊಳ, ಕಟ್ಟೆ, ನದೀ ಇದ್ದರೆ ಅವಗಾಹನ(ಮುಳುಗಿ) ಸ್ನಾನ ಮಾಡಬೇಕು. ಅವುಗಳು ಇಲ್ಲದಿದ್ದರೆ ತಲೆಯಿಂದ ನೀರು ಸುರಿದುಕೊಂಡು ಸ್ನಾನ ಮಾಡಬೇಕು. ಚೆನ್ನಾಗಿ ಈಜು ಬಂದು ಧುಮುಕಲು ಬರುವವರು ನೀರಿಗೆ ಧುಮುಕಿ ಸ್ನಾನ ಮಾಡುವುದು ಒಳ್ಳೆಯದು. ಈಜಲು ಬರದೆ ಇರುವವರು ಅವಗಾಹನ ಸ್ನಾನವಾಗಲಿ ತಲೆಯಿಂದ ನೀರು ಸುರಿದುಕೊಂಡು ಸ್ನಾನಮಾಡುವುದಾಗಲಿ ಮಾಡಬೇಕು.

ತಾನು ಬೇರೆ ಮನೆಗೆ ದತ್ತಾದರೆ ದತ್ತಾದ ಕಡೆಯ ದಾಯಾದಿಗಳ ಹುಟ್ಟಿನಿಂದ ಬರುವ ಆಶೌಚ ಬರುವುದೇ ಹೊರತು ಹೆತ್ತ ತಾಯಿಗೆ ಹುಟ್ಟುವ ಮಕ್ಕಳ ಆಶೌಚವು ಬರುವುದಿಲ್ಲಾ ಮತ್ತು ಹೆತ್ತ ತಂದೆಯ ಕಡೆ ದಾಯಾದಿಗಳ ಆಶೌಚವು ಬರುವುದಿಲ್ಲಾ. ಆದರೆ ದಾಯಾದಿಗಳಿಗೇ ದತ್ತಾಗಿದ್ದರೆ ದಾಯಾದಿಗಳಿಗೆ ಹೇಳಿರುವ ಆಶೌಚವು ಅನ್ವಯಿಸುವುದು.

ಒಂದು 10ದಿನದ ಜಾತಾಶೌಚ(ಮಗುವು ಹುಟ್ಟಿನಿಂದ ಬರುವ ಆಶೌಚ) ಮಧ್ಯದಲ್ಲಿ ಮತ್ತೊಂದು 10ದಿನ ಅಥವಾ 3ದಿನ ಜಾತಾಶೌಚವು ಬಂದರೆ ಮೊದಲನೆಯ ಆಶೌಚದ ಜೊತೆಯಲ್ಲೇ ಎರಡನೆಯ ಆಶೌಚವು ನಿವೃತ್ತಿಯಾಗುವುದು.

## ಗರ್ಭಸ್ರಾವ ಮತ್ತು ಚಿಕ್ಕಮಕ್ಕಳ ಮರಣದ ವಿಷಯ

ನಾಲ್ಕನೆಯ ಮಾಸದಲ್ಲಿ ಆಗುವ ಗರ್ಭನಾಶಕ್ಕೆ 'ಸ್ರಾವ' ಎಂದು ಹೆಸರು. ಐದನೆಯ ಅಥವಾ ಆರನೆಯ ಮಾಸದಲ್ಲಿ ಆಗುವ ಗರ್ಭನಾಶಕ್ಕೆ 'ಪಾತ' ಎಂದು ಹೆಸರು. ಹೆಂಡತಿಗೆ ಗರ್ಭಸ್ರಾವವಾದರೆ ಗಂಡನಿಗೆ ಮಾತ್ರ ಸ್ನಾನ. ಉಳಿದ ಜ್ಞಾತಿಗಳಿಗೆ ಪಾತದ ತಿಂಗಳಿಂದ ಸ್ನಾನ(ಐದು, ಆರು ತಿಂಗಳಿಂದ). ಪಾತದಲ್ಲಿ ಕಠಿಣವಾದ ಮಾಂಸ ಪಿಂಡದ ರೂಪದಿಂದ ಗರ್ಭಪಾತ ಉಂಟಾದರೆ 10 ದಿನಗಳ ದಾಯಾದಿಗಳಿಗೆ(ಸಪಿಂಡರು) 3ದಿನಗಳ ಆಶೌಚವಿರುವುದು. ಮೂರು ತಿಂಗಳೊಳಗೆ ಗರ್ಭಸ್ರಾವವಾದರೆ ತಾಯಿಗೆ 3ದಿನ ಆಶೌಚ. ಅದಕ್ಕೆ ಮೇಲೆ 6ತಿಂಗಳವರೆಗೆ ತಿಗಳಿಗೆ ಅನುಗುಣವಾಗಿ 4,5,6 ದಿನಗಳು ತಾಯಿಗೆ ಆಶೌಚ ಉಂಟು.

ಹುಟ್ಟಿದ ಮಗುವು ಹಲ್ಲು ಹುಟ್ಟುವುದಕ್ಕೆ ಮೊದಲು ಮರಣ ಹೊಂದಿದರೆ 10ದಿನ ಅಥವಾ 3ದಿನ ದಾಯಾದಿಗಳಿಗೆ ಸ್ನಾನದಿಂದ ಶುದ್ಧಿ. ಹಲ್ಲು ಹುಟ್ಟಿದ ಮೇಲೆ 3 ವರ್ಷದೊಳಗೆ ಮರಣ ಹೊಂದಿದರೆದಾಯಾದಿಗಳಿಗೆ ಒಂದು ದಿನ ಆಶೌಚ. 3ವರ್ಷದ ನಂತರ 7ವರ್ಷದವರೆಗೆ ದಾಯಾದಿಗಳಿಗೆ 3ದಿನ ಆಶೌಚ. 8ವರ್ಷದ ನಂತರ ದಾಯಾದಿಗಳಿಗೆ ಪೂರ್ಣವಾದ 10ದಿನಗಳ ಆಶೌಚ ಉಂಟು. ಹುಟ್ಟಿದ ಮಗುವಿನ ಅಣ್ಣತಮ್ಮಂದಿರು ಅಕ್ಕತಂಗಿಯರಿಗೆ (ಒಂದೇ ತಾಯಿಯ ಮಕ್ಕಳು ಅಥವಾಸವತಿಯ ಮಕ್ಕಳು ಯಾರಾದರೂ) ಮತ್ತು ತಂದೆ ತಾಯಿಗಳಿಗೆ ಮಗುವು ಹುಟ್ಟಿದ 10ನೇ ದಿನದ ನಂತರ ಯಾವಾಗಮರಣವಾದರೂ 10ದಿನಗಳ ಆಶೌಚ.

ಹೆಣ್ಣು ಮಗುವು ಹುಟ್ಟಿ 3ವರ್ಷಕ್ಕೆ ಮೊದಲು ಮರಣ ಹೊಂದಿದರೆ ಹೂಳುವುದು ಮೊದಲಾದ ಸಂಸ್ಕಾರದ ನಂತರ ದಾಯಾದಿಗಳಿಗೆ (ಮೂರು ತಲೆಮಾರುವರೆಗೆ) ಸ್ನಾನದಿಂದ ಶುದ್ಧಿ. 3ವರ್ಷದ ನಂತರ ದಾಯಾದಿಗಳಿಗೆ 3ದಿನ ಆಶೌಚ.ಮುಟ್ಟಾದ ಮೇಲೆ ವಿವಾಹಕ್ಕೆ ಮೊದಲು ಮರಣಹೊಂದಿದರೆ ದಾಯಾದಿಗಳಿಗೆ 10ದಿನ ಆಶೌಚ ಉಂಟು.

3 ವರ್ಷದ ನಂತರ ಮರಣ ಹೊಂದಿದರೆ ಆ ಮಗುವಿಗೆ ದಹನವೇ ಸಂಸ್ಕಾರ. 11ದಿನಕ್ಕೆ ಮೊದಲು ಮರಣ ಹೊಂದಿದರೆ ಖನನ(ಹೂಳುವುದೇ) ಸಂಸ್ಕಾರ. 11ನೇ ದಿನದ ನಂತರ 6 ತಿಂಗಳಿಗೆ ಮೊದಲು ಅಥವಾ ಹಲ್ಲು ಹುಟ್ಟುವುದಕ್ಕೆ ಮೊದಲೋ ಮರಣ ಹೊಂದಿದರೆ ಆ ಮಗುವಿಗೆ ದಹನವೋ ಅಥವಾ ಹೂಳುವುದೋ ಯಾವುದಾದರೂ ಒಂದು ಸಂಸ್ಕಾರ. 6 ತಿಂಗಳ ನಂತರ ಅಥವಾ ಹಲ್ಲು ಹುಟ್ಟಿದ ನಂತರ 3 ವರ್ಷಕ್ಕೆ ಮೊದಲು ಮರಣ ಹೊಂದಿದರೆದಹನವೋ, ಹೂಳುವುದೋ ಅಥವಾ ತ್ಯಾಗವೋ ಯಾವುದಾದರೂ ಒಂದು ಸಂಸ್ಕಾರ. ತ್ಯಾಗವೆಂದರೆ ವಸ್ತ್ರಗಳಿಂದ ಅಲಂಕರಿಸಿ ಎಲ್ಲಾದರೊಂದು ಕಡೆ ಇಟ್ಟುಬಿಡುವುದು. ಇವುಗಳಲ್ಲಿ ದಹನ ಸಂಸ್ಕಾರ ಮಾದಿದರೆ ದಾಯಾದಿಗಳು ತಿಲೋದಕ ಬಿಡಬೇಕು.

ಹಲ್ಲು ಹುಟ್ಟುವುದಕ್ಕೆ ಮೊದಲು ಅಥವಾ 6 ತಿಂಗಳಿಗೆ ಮೊದಲು ಮರಣ ಹೊಂದಿದರೆ ಆ ಶಿಶುವನ್ನು ದಹನ ಮಾಡಿದರೆ ತಾಯಿ, ತಂದೆ, ಒಡಹುಟ್ಟಿದವರು ಮತ್ತು ದಾಯಾದಿಗಳಿಗೆ 1 ದಿನ ಆಶೌಚ. ಹೂಳಿದರೆ ಸ್ನಾನದಿಂದ ಶುದ್ಧಿ. ಹಲ್ಲು ಹುಟ್ಟಿದ ನಂತರ ಅಥವಾ 6 ತಿಂಗಳ ನಂತರ 3 ವರ್ಷದೊಳಗೆ ಮರಣ ಹೊಂದಿದರೆ ಹೂಳಿದರೆ 1 ದಿನವೂ,ದಹನವೋ ತ್ಯಾಗವೋ ಮಾಡಿದರೆ 3ದಿನ ಆಶೌಚ. ಮರಣ ಹೊಂದಿದ ಶಿಶುವಿಗೆ ಮರಣ ಹೊಂದಿದ ದಿನ ಸಂಸ್ಕಾರನಡೆಯದೆ ಬೇರೆ ದಿನ ನಡೆದರೆ ಸಂಸ್ಕಾರ ನಡೆದ ದಿನದಿಂದ 1 ದಿನವೋ 3ದಿನವೋ ಆಶೌಚ ಉಂಟಾಗುತ್ತದೆ.

3ವರ್ಷದ ನಂತರ 7ವರ್ಷಕ್ಕೆ ಮೊದಲು ಶಿಶು ಮರಣ ಹೊಂದಿದರೆ ತಂದೆ, ತಾಯಿ, ಒಡಹುಟ್ಟಿದವರು ಇವರುಗಳಲ್ಲದೆ ದಾಯಾದಿಗಳಿಗೆ 3 ದಿನ ಆಶೌಚ ಉಂಟು. 7 ವರ್ಷದ ನಂತರ ಮರಣ ಹೊಂದಿದರೆ 10 ದಿನ ಆಶೌಚ ಉಂಟು. 3ವರ್ಷದ ನಂತರ ಶಿಶು ಮರಣ ಹೊಂದಿದರೆ ದಾಯಾದಿಗಳಿಗೆ ಆಶೌಚದ ಜೊತೆಗೆ ತಿಲೋದಕವೂ ಉಂಟು.

**ವೈದಿಕ ಸಾರ್ವಭೌಮ ತೋಳಪ್ಪರ್ರವರು ಆಶೌಚ ಶತಕದಲ್ಲಿ ಕೆಳಕಂಡಂತೆ ತಿಳಿಸಿರುತ್ತಾರೆ:**

1. ಬ್ರಾಹ್ಮಣರಲ್ಲಿ ಸಪಿಂಡರುಗಳಿಗೆ ಜನನದಲ್ಲಿ ಅಥವಾ ಮರಣದಲ್ಲಿ 10ದಿನಗಳ ಆಶೌಚವೆಂದೂ, ಕ್ಷತ್ರಿಯರಿಗೆ 16ದಿನಗಳೆಂದೂ, ವೈಶ್ಯರಿಗೆ 20ದಿನಗಳೆಂದೂ, ಶೂದ್ರರಿಗೆ ಒಂದು ತಿಂಗಳೆಂದೂ ಅನೇಕ ಋಷಿಗಳ ಮತವೆಂದೂ ತಿಳಿಸಿರುತ್ತಾರೆ.
2. ಶ್ರೀವೈಷ್ಣವ ಆಚಾರ್ಯರಲ್ಲಿ ಶಂಖ,ಚಕ್ರಾಂಕನ(ಸಮಾಶ್ರಯಣ) ಮಾಡಿಕೊಂಡಿರುವ ಶೂದ್ರರಿಗೆ ಸಪಿಂಡರಲ್ಲಿ ಜನನ, ಮರಣಗಳಾದರೆ 15ದಿನಗಳು ಆಶೌಚವೆಂದು ತಿಳಿಸಿರುತ್ತಾರೆ.

| | ಆಶೌಚ (ಸೂತಕ) ಇರಬೇಕಾದವರು | | | | | |
|---|---|---|---|---|---|---|
| | ಗಂಡಸರು | | | | ಹೆಂಗಸರು | |
| | ಅನುಪನೀತ | ಬ್ರಹ್ಮಚಾರಿ | ಗೃಹಸ್ಥರು | | ಅವಿವಾಹಿತೆ | ವಿವಾಹಿತೆ |
| ಮೃತರು | | | ಜೀವತ್ ಪಿತೃಕ | ಅಜೀವತ್ ಪಿತೃಕ | | |
| ಸಪಿಂಡರು(ಮೊದಲ 7 ತಲೆಮಾರಿನ ಗಂಡಸು, ಮದುವೆಯಾಗದ ಹೆಂಗಸು, ಸೊಸೆಯರು) (10ದಿನದ ದಾಯಾದಿಗಳು)ವಿವರ8,9,10,11ಪು. | 10ದಿನ | – | 10ದಿನ | 10ದಿನ(ತಿ.) | 10ದಿನ ತಂದೆಯ ಕಡೆಯವರು | 10ದಿನ ಗಂಡನ ಕಡೆಯವರು |
| ಸೋದಕರು(ಎರಡನೆಯ 7 ತಲೆಮಾರಿನ ಗಂಡಸು, ಮದುವೆಯಾಗದ ಹೆಂಗಸು, ಸೊಸೆಯರು)(3ದಿನದ ದಾಯಾದಿಗಳು) | 3ದಿನ | – | 3ದಿನ | #3ದಿನ | 3ದಿನ ತಂದೆಯ ಕಡೆಯವರು | 3ದಿನ ಗಂಡನ ಕಡೆಯವರು |
| #3 ದಿನಗಳ(ಸೋದಕರ) ದಾಯಾದಿಗಳ ಆಶೌಚಗಳಲ್ಲಿ ಮಂಡಯಮ್ ಮತ್ತು ಉಳಿದ ಎಲ್ಲಾ ತೆಂಕಲೆ ಶ್ರೀವೈಷ್ಣವರಲ್ಲಿ ಕ್ಷೌರ, ತಿಲೋದಕ ಈಗ ಪದ್ಧತಿಯಲ್ಲಿ ಇಲ್ಲಾ. ವಡಕಲೆ ಶ್ರೀವೈಷ್ಣವರಲ್ಲಿ ಕ್ಷೌರ, ತಿಲೋದಕ ಈಗಲೂ ಪದ್ಧತಿಯಲ್ಲಿ ಇದೆ. | | | | | | |
| ತಂದೆ (ಸಪಿಂಡರು) | 10ದಿನ (ಕ್ಷೌ.) | 10ದಿನ (ಕ್ಷೌ.ತಿ.) | – | 10ದಿನ (ಕ್ಷೌ.ತಿ.) | 10ದಿನ | 3ದಿನ |
| ತಾಯಿ (ಸಪಿಂಡರು) | 10ದಿನ (ಕ್ಷೌ.) | 10ದಿನ (ಕ್ಷೌ.ತಿ.) | 10ದಿನ (ಕ್ಷೌ.ತಿ.) | 10ದಿನ (ಕ್ಷೌ.ತಿ.) | 10ದಿನ | 3ದಿನ |
| ತಾಯಿಯ ತಂದೆ (ಮಾತಾಮಹ) | 3ದಿನ | – | 3ದಿನ | 3ದಿನ *(ಕ್ಷೌ.ತಿ.) | 3ದಿನ | 3ದಿನ |
| ತಾಯಿಯ ತಾಯಿ (ಮಾತಾಮಹಿ) | 3ದಿನ | – | 3ದಿನ | 3ದಿನ *(ಕ್ಷೌ.ತಿ.) | 3ದಿನ | 3ದಿನ |
| *ತಾಯಿಯ ತಂದೆ ಮತ್ತು ತಾಯಿಯ ತಾಯಿಗೆ ತಾನೇ ಕರ್ತೃವಾಗಬೇಕಾದಲ್ಲಿ 10ದಿನ ಆಶೌಚವಿದ್ದೇ ಕ್ರಿಯೆಗಳನ್ನು ಮಾಡಬೇಕು. | | | | | | |
| (ಸಪಿ)1.ತಂದೆಯ ತಂದೆ ಮತ್ತು ತಂದೆಯ ತಾಯಿ(ತಾತ ಮತ್ತು ಅಜ್ಜಿ) | 10ದಿನ | – | 10ದಿನ | 10ದಿನ (ಕ್ಷೌ.ತಿ.) | 10ದಿನ | 3ದಿನ |
| 2.ತಂದೆಯ ತಂದೆಯ ಸೋದರರು ಮತ್ತು} ಅವರ ಪತ್ನೀಯರು ಮತ್ತು 3.ತಂದೆಯ ತಂದೆಯ ತಂದೆಯ ಸೋದರರು,ಪತ್ನೀಯರು} | 10ದಿನ | – | 10ದಿನ | 10ದಿನ (ಕ್ಷೌ.ತಿ.) | 10ದಿನ | – |
| ತಂದೆಯ ಸೋದರ (ಚಿಕ್ಕಪ್ಪ ಅಥವಾ ದೊಡ್ಡಪ್ಪ) (ಸಪಿಂಡರು) | 10ದಿನ | – | 10ದಿನ | 10ದಿನ (ಕ್ಷೌ.ತಿ.) | 10ದಿನ | 3ದಿನ |
| ತಂದೆಯ ಸೋದರಿ:1.ವಿವಾಹಿತೆ (ಸೋದರತ್ತೆ) | 3ದಿನ | – | 3ದಿನ | 3ದಿನ (ಕ್ಷೌ.ತಿ.) | 3ದಿನ | 3ದಿನ |
| 2.ಅವಿವಾಹಿತೆ(ಸಪಿಂಡರು) | 10ದಿನ | – | 10ದಿನ | 10ದಿನ (ಕ್ಷೌ.ತಿ.) | 10ದಿನ | 3ದಿನ |
| ತಾಯಿಯ ಸೋದರಿ, ಸೋದರ (ಚಿಕ್ಕಮ್ಮ, ದೊಡ್ಡಮ್ಮ, ಸೋದರಮಾವ) | 3ದಿನ | – | 3ದಿನ | 3ದಿನ (ಕ್ಷೌ.ತಿ.) | 3ದಿನ | 3ದಿನ |
| ಅಣ್ಣ – ತಮ್ಮ (ಸಪಿಂಡರು) | 10ದಿನ | – | 10ದಿನ | 10ದಿನ *(ಕ್ಷೌ.ತಿ.) | 10ದಿನ | 3ದಿನ |
| *ಅಣ್ಣನಿಗೆ ಮಾತ್ರ ಅಜೀವತ್ ಪಿತೃಕರಿಗೆ ಕ್ಷೌರ ಮತ್ತು ತಿಲೋದಕ ಎರಡೂ ಉಂಟು; ತಮ್ಮನಿಗೆ ತಿಲೋದಕ ಮಾತ್ರ. | | | | | | |
| ಅಕ್ಕ – ತಂಗಿ : 1. ವಿವಾಹಿತೆ | 3ದಿನ | – | 3ದಿನ | 3ದಿನ *(ಕ್ಷೌ.ತಿ.) | 3ದಿನ | 3ದಿನ |
| 2.ಅವಿವಾಹಿತೆ (ಸಪಿಂಡರು) | 10ದಿನ | – | 10ದಿನ | 10ದಿನ *(ಕ್ಷೌ.ತಿ.) | 10ದಿನ | 3ದಿನ |
| *ಅಕ್ಕನಿಗೆ ಮಾತ್ರ ಅಜೀವತ್ ಪಿತೃಕರಿಗೆ ಕ್ಷೌರ ಮತ್ತು ತಿಲೋದಕ ಎರಡೂ ಉಂಟು; ತಂಗಿಗೆ ತಿಲೋದಕ ಮಾತ್ರ. | | | | | | |
| ಬೇರೆ ಮನೆಗೆ ದತ್ತಾಗಿರುವ ಮಗನ ವಿಷಯದಲ್ಲಿ; ಜನಕ ಪಿತಾ – ಮಾತಾ(ಹೆತ್ತ ತಾಯಿ–ತಂದೆ) | – | – | *3ದಿನ | *3ದಿನ | – | – |
| *ದತ್ತಾಗಿರುವವರು ಹತ್ತು ದಿನ ದಾಯಾದಿಗಳ ಮನೆಗೆ ದತ್ತಾಗಿಲ್ಲದಿದ್ದರೆ ತನ್ನ ಜನಕ ಪಿತಾ, ಮಾತಾಗೆ ಮೇಲೆ ತಿಳಿಸಿರುವುದು ಅನ್ವಯಿಸುತ್ತದೆ. 10ದಿನ ದಾಯಾದಿಗಳ ಮನೆಗೆ ದತ್ತಾಗಿದ್ದರೆ 10ದಿನ ದಾಯಾದಿಗಳಿಗೆ ಹೇಳಿರುವ ಕ್ಷೌರ, ತಿಲೋದಕ ಅನ್ವಯಿಸುತ್ತದೆ. | | | | | | |

| | ಆಶೌಚ (ಸೂತಕ) ಇರಬೇಕಾದವರು | | | | | |
|---|---|---|---|---|---|---|
| | ಗಂಡಸರು | | | | ಹೆಂಗಸರು | |
| | ಅನುಪನೀತ | ಬ್ರಹ್ಮಚಾರಿ | ಗೃಹಸ್ಥರು | | ಅವಿವಾಹಿತೆ | ವಿವಾಹಿತೆ |
| **ಮೃತರು** | | | **ಜೀವತ್ ಪಿತೃಕ** | **ಅಜೀವತ್ ಪಿತೃಕ** | | |
| ಮಗ ಮತ್ತು ಅವನ ಹೆಂಡತಿ(ಸಪಿಂಡರು) | – | – | 10ದಿನ | 10ದಿನ(ತಿ.) | – | 10ದಿನ |
| ಮಗಳು: 1.ವಿವಾಹಿತೆ<br>2.ಅವಿವಾಹಿತೆ (ಸಪಿಂಡರು) | –<br>– | –<br>– | 3ದಿನ<br>10ದಿನ | 3ದಿನ(ತಿ.)<br>10ದಿನ(ತಿ.) | –<br>– | 3ದಿನ<br>10ದಿನ |
| ಮಗನ ಮಗ ಮತ್ತು ಅವನ ಹೆಂಡತಿ (ಸಪಿಂಡರು) | – | – | 10ದಿನ | 10ದಿನ(ತಿ.) | – | 10ದಿನ |
| ಮಗನ ಮಗಳು: 1.ವಿವಾಹಿತೆ<br>2.ಅವಿವಾಹಿತೆ(ಸಪಿಂಡರು) | –<br>– | –<br>– | 3ದಿನ<br>10ದಿನ | 3ದಿನ(ತಿ.)<br>10ದಿನ(ತಿ.) | –<br>– | 3ದಿನ<br>10ದಿನ |
| ಮಗಳ ಮಗ | – | – | 3ದಿನ | 3ದಿನ(ತಿ.) | – | 3ದಿನ |
| ಮಗಳ ಮಗಳು: 1.ವಿವಾಹಿತೆ<br>2.ಅವಿವಾಹಿತೆ | –<br>– | –<br>– | 3ದಿನ<br>3ದಿನ | 3ದಿನ(ತಿ.)<br>3ದಿನ(ತಿ.) | –<br>– | 3ದಿನ<br>3ದಿನ |
| ಸೋದರನ ಮಗ (ಸಪಿಂಡರು)<br>ಸೋದರನ ಮಗನ ಹೆಂಡತಿ (ಸಪಿಂಡರು) | 10ದಿನ<br>10ದಿನ | –<br>– | 10ದಿನ<br>10ದಿನ | 10ದಿನ(ತಿ.)<br>10ದಿನ(ತಿ.) | 10ದಿನ<br>10ದಿನ | 3ದಿನ<br>– |
| ಸೋದರಿಯ ಮಗ | 3ದಿನ | – | 3ದಿನ | 3ದಿನ(ತಿ.) | 3ದಿನ | 3ದಿನ |
| ಸೋದರನ ಮಗಳು: 1.ವಿವಾಹಿತೆ<br>2.ಅವಿವಾಹಿತೆ(ಸಪಿಂಡರು) | 3ದಿನ<br>10ದಿನ | –<br>– | 3ದಿನ<br>10ದಿನ | 3ದಿನ(ತಿ.)<br>10ದಿನ(ತಿ.) | 3ದಿನ<br>10ದಿನ | 3ದಿನ<br>3ದಿನ |
| ಸೋದರಿಯ ಮಗಳು 1.ವಿವಾಹಿತೆ<br>2.ಅವಿವಾಹಿತೆ | 3ದಿನ<br>3ದಿನ | –<br>– | 3ದಿನ<br>3ದಿನ | 3ದಿನ(ತಿ.)<br>3ದಿನ(ತಿ.) | 3ದಿನ<br>3ದಿನ | 3ದಿನ<br>3ದಿನ |
| ಮೊಮ್ಮಗನ(ಮಗನ ಮಗ)ಮಗ ಮತ್ತು ಅವನ ಹೆಂಡತಿ (ಸಪಿಂಡರು) | – | – | 10ದಿನ | 10ದಿನ(ತಿ.) | – | 10ದಿನ |
| ಮೊಮ್ಮಗನ(ಮಗನ ಮಗ)ಮಗಳು:1.ವಿವಾಹಿತೆ<br>2.ಅವಿವಾಹಿತೆ (ಸಪಿಂಡರು) | –<br>– | –<br>– | –<br>10ದಿನ | –<br>10ದಿನ(ತಿ.) | –<br>– | –<br>10ದಿನ |
| ಹೆಣ್ಣು ಕೊಟ್ಟ ಅತ್ತೆ – ಮಾವ | – | – | 3ದಿನ | 3ದಿನ (ಕ್ಷೌ.ತಿ.) | – | – |
| **ಹೆಂಡತಿ:** ಗಂಡನಿಗೆ 10ದಿನ ಆಶೌಚ; ಜೀವತ್ ಪಿತೃಕನಾದರೆ ತಿಲೋದಕ ಬಿಡುವಹಾಗಿಲ್ಲಾ;ಕ್ಷೌರವೂ ಇಲ್ಲಾ; ಅಜೀವತ್ ಪಿತೃಕನಾದರೆ ತಿಲೋದಕ ಉಂಟು; ಕ್ಷೌರವಿಲ್ಲಾ; ತಾನೇ ಕರ್ತೃವಾದರೆ ಕ್ರಿಯೆ ಮತ್ತು ತಿಲೋದಕ ಎರಡೂ ಉಂಟು. ಕ್ಷೌರವಿಲ್ಲಾ; | | | | | | |
| **ಗಂಡನ ತಂದೆ, ತಾಯಿ ಮತ್ತು ಇತರೆ ಸಂಬಂಧಗಳು:** ಗಂಡನಿಗೆ ಬರುವ ಎಲ್ಲಾ ಆಶೌಚಗಳೂ ಹೆಂಡತಿಗೂ ಉಂಟು. ಆದರೆ ಗಂಡನಿಗೆ ಬರುವ ಆಶೌಚವು ಮೊದಲು ಹೆಂಡತಿಗೆ ತಿಳಿದು ಗಂಡನಿಗೆ ನಂತರ ತಿಳಿದು ಗಂಡನು ತಿಲೋದಕಕ್ಕಾಗಿ ಅಧಿಕವಾಗಿ ಆಶೌಚವಿರುವ ಸನ್ನಿವೇಶ ಬಂದರೆ ಅದು ಹೆಂಡತಿಗೆ ಅನ್ವಯಿಸುವುದಿಲ್ಲಾ.ಇದಲ್ಲದೆ ಗಂಡನಿಗೆ ಪಂಚ ಸಂಸ್ಕಾರ ಮಾಡಿದ ಗೃಹಸ್ಥ ಆಚಾರ್ಯರ ಮರಣದಿಂದ ಬರುವ ಆಶೌಚವು ಹೆಂಡತಿಗೆ ಅವರು ಆಚಾರ್ಯರು ಅಲ್ಲದಿದ್ದರೆ ಅನ್ವಯಿಸುವುದಿಲ್ಲಾ. | | | | | | |
| ಅಣ್ಣನ ಹೆಂಡತಿ – ಅತ್ತಿಗೆ (ಸಪಿಂಡರು) | 10ದಿನ | – | 10ದಿನ | 10ದಿನ (ಕ್ಷೌ.ತಿ.) | 10ದಿನ | – |
| ತಮ್ಮನ ಹೆಂಡತಿ (ಸಪಿಂಡರು) | 10ದಿನ | – | 10ದಿನ | 10ದಿನ(ತಿ.) | 10ದಿನ | – |
| ಚಿಕ್ಕಪ್ಪ ಅಥವಾ ದೊಡ್ಡಪ್ಪರವರ ಪತ್ನೀ(ಸಪಿಂ)<br>(ತಂದೆಯ ಅಣ್ಣ ಅಥವಾ ತಮ್ಮನವರ ಪತ್ನೀ) | 10ದಿನ | – | 10ದಿನ | 10ದಿನ (ಕ್ಷೌ.ತಿ.) | 10ದಿನ | – |
| ಸೋದರಮಾವನವರ ಪತ್ನೀ<br>(ತಾಯಿಯ ಸೋದರನ ಪತ್ನೀ) | 3ದಿನ | – | 3ದಿನ | 3ದಿನ (ಕ್ಷೌ.ತಿ.) | 3ದಿನ | 3ದಿನ |
| ಗೃಹಸ್ಥ ಆಚಾರ್ಯರು (ಪಂಚ ಸಂಸ್ಕಾರ ಮಾಡಿದವರು) | | 3ದಿನ | 3ದಿನ | 3ದಿನ | 3ದಿನ | 3ದಿನ |

| | ಆಶೌಚ (ಸೂತಕ) ಇರಬೇಕಾದವರು | | | | | |
|---|---|---|---|---|---|---|
| | ಗಂಡಸರು | | | | ಹೆಂಗಸರು | |
| | ಅನುಪನೀತ | ಬ್ರಹ್ಮಚಾರಿ | ಗೃಹಸ್ಥರು | | ಅವಿವಾಹಿತೆ | ವಿವಾಹಿತೆ |
| ಮೃತರು | | | ಜೀವತ್ ಪಿತೃಕ | ಅಜೀವತ್ ಪಿತೃಕ | | |
| **ಈ ಕೆಳಗೆ ಸೂಚಿಸಿರುವುದು ಮಂಡಯಮ್ ಶ್ರೀವೈಷ್ಣವರಲ್ಲಿ ಮಾತ್ರ ಈಗ ಬಳಕೆಯಲ್ಲಿ ಇರುವ ಆಚರಣೆ:** | | | | | | |
| ತಂದೆಯ ಸೋದರನ ಮಗ:ಅವರು ತನಗಿಂತ ಹಿರಿಯರಾದರೆ ಕ್ಷೌ.ತಿ.ಕಿರಿಯರಾದರೆ ತಿ.(ಸಪಿ)<br>ತಂದೆಯ ಸೋದರನ ಮಗನ ಹೆಂಡತಿ(ಸಪಿ.) | 10ದಿನ<br>10ದಿನ | –<br>– | 10ದಿನ<br>10ದಿನ | 10ದಿನ*(ತಿ.)<br>10ದಿನ*(ತಿ.) | 10ದಿನ<br>10ದಿನ | #3ದಿನ<br>– |
| ತಂದೆಯ ಸೋದರನ ಮಗಳು: #1.ವಿವಾಹಿತೆ<br>2.ಅವಿವಾಹಿತೆ* (ಸಪಿಂಡರು) | #3ದಿನ<br>10ದಿನ | –<br>– | #3ದಿನ<br>10ದಿನ | #3ದಿನ<br>10ದಿನ*(ತಿ.) | #3ದಿನ<br>10ದಿನ | #3ದಿನ<br>#3ದಿನ |
| *ತಂದೆಯ ಸೋದರನ ಮಗಳು ಅವಿವಾಹಿತೆಯಾಗಿದ್ದರೆ ಅಜೀವತ್ ಪಿತೃಕನಿಗೆ ಅವಳು ತನಗಿಂತ ಹಿರಿಯವಳಾಗಿದ್ದರೆ ಕ್ಷೌರ ಮತ್ತು ತಿಲೋದಕ ಎರಡೂ ಉಂಟು; ಅವಳು ತನಗಿಂತ ಕಿರಿಯವಳಾಗಿದ್ದರೆ ತಿಲೋದಕ ಮಾತ್ರ ಉಂಟು; | | | | | | |
| #ತಂದೆಯ ಸೋದರಿಯ ಮಗ | #3ದಿನ | – | #3ದಿನ | #3ದಿನ | #3ದಿನ | #3ದಿನ |
| #ತಂದೆಯ ಸೋದರಿಯ ಮಗಳು | #3ದಿನ | – | #3ದಿನ | #3ದಿನ | #3ದಿನ | #3ದಿನ |
| #ತಾಯಿಯ ಸೋದರನ ಮಗ | #3ದಿನ | – | #3ದಿನ | #3ದಿನ | #3ದಿನ | #3ದಿನ |
| #ತಾಯಿಯ ಸೋದರನ ಮಗಳು | #3ದಿನ | – | #3ದಿನ | #3ದಿನ | #3ದಿನ | #3ದಿನ |
| #ತಾಯಿಯ ಸೋದರಿಯ ಮಗ | #3ದಿನ | – | #3ದಿನ | #3ದಿನ | #3ದಿನ | #3ದಿನ |
| #ತಾಯಿಯ ಸೋದರಿಯ ಮಗಳು | #3ದಿನ | – | #3ದಿನ | #3ದಿನ | #3ದಿನ | #3ದಿನ |
| #ವಿಶೇಷ ವಿಷಯ ಸೂಚನೆ: #ಈ ಚಿಹ್ನೆಯೊಂದಿಗೆ ನಮೂದಿಸಿರುವ 3ದಿನ ಆಶೌಚವು **ಮಂಡಯಮ್ ಶ್ರೀವೈಷ್ಣವರಲ್ಲಿ** ಮಾತ್ರ ಈಗ ಬಳಕೆಯಲ್ಲಿ ಇದೆ. ಈ ಸಂಬಂಧಗಳಿಗೆ ಕ್ಷೌರ–ತಿಲೋದಕ ಎರಡೂ ಇಲ್ಲಾ. ಆದರೆ ಶಾಸ್ತ್ರ ರೀತಿ ಈ ಸಂಬಂಧಗಳಿಗೆ **ಪಕ್ಷಿಣೀ ಆಶೌಚ** ಮಾತ್ರ(ಒಂದೂವರೆ ದಿನ). **ಪಕ್ಷಿಣೀ ಆಶೌಚವನ್ನು ಮಂಡಯಮ್ ಶ್ರೀವೈಷ್ಣವರನ್ನು ಬಿಟ್ಟು** ಉಳಿದ ಎಲ್ಲಾ ಶ್ರೀವೈಷ್ಣವರು ಆಚರಣೆಯಲ್ಲಿ ಇಟ್ಟುಕೊಂಡಿದ್ದಾರೆ. ಈ ಸಂಬಂಧಗಳಿಗೆ ಕ್ಷೌರ–ತಿಲೋದಕ ಎರಡೂ ಇಲ್ಲಾ. ಆಶೌಚ ಮಾತ್ರ. **ಪಕ್ಷಿಣೀ ಆಶೌಚ**: ಎಂದರೆ 3 ಹೊತ್ತುಆಶೌಚ. ಅಚಿದರೆ ಮರಣವು ಹಗಲಿನಲ್ಲಿ ಸಂಭವಿಸಿದ್ದರೆ ಅಂದಿನ ಹಗಲು,ರಾತ್ರಿ ಮತ್ತು ಮಾರನೆಚು ದಿನದ ಹಗಲು ಎಂಬ ಮೂರುಹೊತ್ತುಆಶೌಚ. ಮರಣವು ರಾತ್ರಿಯಲ್ಲಿ ಸಂಭವಿಸಿದ್ದರೆ ಅಂದಿನ ರಾತ್ರಿ ,ಮಾರನೆಚು ದಿನದ ಹಗಲು ಮತ್ತು ರಾತ್ರಿ ಎಂಬ ಮೂರುಹೊತ್ತು ಆಶೌಚ.<br>**ಈ ಕೆಳಗೆ ಸೂಚಿಸಿರುವುದು ಮಂಡಯಮ್ ಶ್ರೀವೈಷ್ಣವರನ್ನು ಬಿಟ್ಟು ಉಳಿದ ಎಲ್ಲಾ ಶ್ರೀವೈಷ್ಣವರಲ್ಲಿ ಇರುವ ಆಚರಣೆ: (ಪಕ್ಷಿಣೀ ಆಶೌಚ)** | | | | | | |
| ತಂದೆಯ ಸೋದರನ ಮಗ:ಅವರು ತನಗಿಂತ ಹಿರಿಯರಾದರೆ ಕ್ಷೌ.ತಿ.ಕಿರಿಯರಾದರೆ ತಿ.(ಸಪಿ)<br>ತಂದೆಯ ಸೋದರನ ಮಗನ ಹೆಂಡತಿ(ಸಪಿ.) | 10ದಿನ<br>10ದಿನ | –<br>– | 10ದಿನ<br>10ದಿನ | 10ದಿನ*(ತಿ.)<br>10ದಿನ*(ತಿ.) | 10ದಿನ<br>10ದಿನ | 1 1/2ದಿನ<br>– |
| ತಂದೆಯ ಸೋದರನ ಮಗಳು: 1.ವಿವಾಹಿತೆ<br>2.ಅವಿವಾಹಿತೆ:* (ಸಪಿಂಡರು) | 1 1/2ದಿನ<br>10ದಿನ | –<br>– | 1 1/2ದಿನ<br>10ದಿನ | 1 1/2 ದಿನ<br>10ದಿನ*(ತಿ.) | 1 1/2ದಿನ<br>10ದಿನ | 1 1/2ದಿನ<br>1 1/2ದಿನ |
| *ಅವಿವಾಹಿತೆ ಅಜೀವತ್‌ಪಿತೃಕನಿಗೆ ತನಗಿಂತ ಹಿರಿಯವಳಾದರೆ ಕ್ಷೌರ ಮತ್ತು ತಿಲೋದಕ;ಕಿರಿಯವಳಾದರೆ ಕ್ಷೌರ ಇಲ್ಲ, ತಿಲೋದಕ ಮಾತ್ರ | | | | | | |
| ತಂದೆಯ ಸೋದರಿಯ ಮಗ | 1 1/2ದಿನ | – | 1 1/2ದಿನ | 1 1/2ದಿನ | 1 1/2ದಿನ | 1 1/2ದಿನ |
| ತಂದೆಯ ಸೋದರಿಯ ಮಗಳು | 1 1/2ದಿನ | – | 1 1/2ದಿನ | 1 1/2ದಿನ | 1 1/2ದಿನ | 1 1/2ದಿನ |
| ತಾಯಿಯ ಸೋದರನ ಮಗ | 1 1/2ದಿನ | – | 1 1/2ದಿನ | 1 1/2ದಿನ | 1 1/2ದಿನ | 1 1/2ದಿನ |
| ತಾಯಿಯ ಸೋದರನ ಮಗಳು | 1 1/2ದಿನ | – | 1 1/2ದಿನ | 1 1/2ದಿನ | 1 1/2ದಿನ | 1 1/2ದಿನ |
| ತಾಯಿಯ ಸೋದರಿಯ ಮಗ | 1 1/2ದಿನ | – | 1 1/2ದಿನ | 1 1/2ದಿನ | 1 1/2ದಿನ | 1 1/2ದಿನ |
| ತಾಯಿಯ ಸೋದರಿಯ ಮಗಳು | 1 1/2ದಿನ | – | 1 1/2ದಿನ | 1 1/2ದಿನ | 1 1/2ದಿನ | 1 1/2ದಿನ |

| | ಆಶೌಚ (ಸೂತಕ) ಇರಬೇಕಾದವರು | | | | | |
|---|---|---|---|---|---|---|
| | ಗಂಡಸರು | | | | ಹೆಂಗಸರು | |
| | ಅನುಪನೀತ | ಬ್ರಹ್ಮಚಾರಿ | ಗೃಹಸ್ಥರು | | ಅವಿವಾಹಿತೆ | ವಿವಾಹಿತೆ |
| ಮೃತರು | | | ಜೀವತ್ ಪಿತೃಕ | ಅಜೀವತ್ ಪಿತೃಕ | | |
| **ಸಪಿಂಡರು(ಮೂಲ ಪುರುಷನಿಂದ 7ತಲೆಮಾರಿನ ಉಳಿದವರಿಗೆ ವಿವರಣೆ:**<br>ಸೋದರನ ಮೊಮ್ಮಗ(ಮಗನ ಮಗ) ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ಸೋದರನ ಮೊಮ್ಮಗಳು(ಮಗನ ಮಗಳು)<br>ವಿವಾಹಿತೆ<br>ಅವಿವಾಹಿತೆ | <br>–<br>10ದಿನ | <br>–<br>– | <br>–<br>10ದಿನ | <br>–<br>10ದಿನ(ತ್ರಿ.) | <br>–<br>10ದಿನ | <br>–<br>– |
| ಸೋದರನ ಮೊಮ್ಮಗನ(ಮಗನ ಮಗ) ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ಸೋದರನ ಮೊಮ್ಮಗನ(ಮಗನ ಮಗ)<br>ಮಗಳು: ವಿವಾಹಿತೆ<br>ಅವಿವಾಹಿತೆ | <br>–<br>10ದಿನ | <br>–<br>– | <br>–<br>10ದಿನ | <br>–<br>10ದಿನ(ತ್ರಿ.) | <br>–<br>10ದಿನ | <br>–<br>– |
| ತಂದೆಯ ಸೋದರನ ಮೊಮ್ಮಗ(ಮಗನ ಮಗ) ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಂದೆಯ ಸೋದರನ ಮೊಮ್ಮಗಳು(ಮಗನ ಮಗಳು): ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತ್ರಿ.) | –<br>10ದಿನ | –<br>– |
| ತಂದೆಯ ಸೋದರನ ಮೊಮ್ಮಗನ(ಮಗನ ಮಗ) ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಂದೆಯ ಸೋದರನ ಮೊಮ್ಮಗನ(ಮಗನ ಮಗ)ಮಗಳು:ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತ್ರಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ) ಸೋದರನ ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಾತನ(ತಂದೆಯ ತಂದೆ) ಸೋದರನ ಮಗಳು<br>ವಿವಾಹಿತೆ<br>ಅವಿವಾಹಿತೆ | <br>–<br>10ದಿನ | <br>–<br>– | <br>–<br>10ದಿನ | <br>–<br>10ದಿನ(ತ್ರಿ.) | <br>–<br>10ದಿನ | <br>–<br>– |
| ತಾತನ(ತಂದೆಯ ತಂದೆ) ಸೋದರನ ಮೊಮ್ಮಗ(ಮಗನ ಮಗ) ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಾತನ(ತಂದೆಯ ತಂದೆ) ಸೋದರನ ಮೊಮ್ಮಗಳು(ಮಗನ ಮಗಳು): ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತ್ರಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ) ಸೋದರನ ಮೊಮ್ಮಗನ(ಮಗನ ಮಗ)ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಾತನ(ತಂದೆಯ ತಂದೆ) ಸೋದರನ ಮೊಮ್ಮಗನ(ಮಗನ ಮಗ)ಮಗಳು:<br>ವಿವಾಹಿತೆ<br>ಅವಿವಾಹಿತೆ | <br>–<br>10ದಿನ | <br>–<br>– | <br>–<br>10ದಿನ | <br>–<br>10ದಿನ(ತ್ರಿ.) | <br>–<br>10ದಿನ | <br>–<br>– |
| | | | | | | |

| | ಆಶೌಚ (ಸೂತಕ) ಇರಬೇಕಾದವರು | | | | | |
|---|---|---|---|---|---|---|
| | ಗಂಡಸರು | | | | ಹೆಂಗಸರು | |
| | ಅನುಪನೀತ | ಬ್ರಹ್ಮಚಾರಿ | ಗೃಹಸ್ಥರು | | ಅವಿವಾಹಿತೆ | ವಿವಾಹಿತೆ |
| ಮೃತರು | | | ಜೀವತ್ ಪಿತೃಕ | ಅಜೀವತ್ ಪಿತೃಕ | | |
| ತಾತನ(ತಂದೆಯ ತಂದೆ)ತಂದೆಯ ಸೋದರನ ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಾತನ(ತಂದೆಯ ತಂದೆ)ತಂದೆಯ ಸೋದರನ ಮಗಳು: ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತ್ರಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ)ತಂದೆಯ ಸೋದರನ ಮೊಮ್ಮಗ(ಮಗನ ಮಗ) ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಾತನ(ತಂದೆಯ ತಂದೆ)ತಂದೆಯ ಸೋದರನ ಮೊಮ್ಮಗಳು(ಮಗನ ಮಗಳು): ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತ್ರಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ)ತಂದೆಯ ಸೋದರನ ಮೊಮ್ಮಗನ(ಮಗನ ಮಗ)ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಾತನ(ತಂದೆಯ ತಂದೆ)ತಂದೆಯ ಸೋದರನ ಮೊಮ್ಮಗನ(ಮಗನ ಮಗ)ಮಗಳು:ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತ್ರಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ಸೋದರನ ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ಸೋದರನ ಮಗಳು: ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತ್ರಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ಸೋದರನ ಮೊಮ್ಮಗ(ಮಗನ ಮಗ) ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ಸೋದರನ ಮೊಮ್ಮಗಳು(ಮಗನ ಮಗಳು): ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತ್ರಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ಸೋದರನ ಮೊಮ್ಮಗನ(ಮಗನ ಮಗ) ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ಸೋದರನ ಮೊಮ್ಮಗನ(ಮಗನ ಮಗ) ಮಗಳು:ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತ್ರಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ಸೋದರನ ಮೊಮ್ಮಗನ(ಮಗನ ಮಗ) ಮೊಮ್ಮಗ(ಮಗನ ಮಗ) ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | – | 10ದಿನ |

| | ಆಶೌಚ (ಸೂತಕ) ಇರಬೇಕಾದವರು | | | | | |
|---|---|---|---|---|---|---|
| | ಗಂಡಸರು | | | | ಹೆಂಗಸರು | |
| | ಅನುಪನೀತ | ಬ್ರಹ್ಮಚಾರಿ | ಗೃಹಸ್ಥರು | | ಅವಿವಾಹಿತೆ | ವಿವಾಹಿತೆ |
| ಮೃತರು | | | ಜೀವತ್ ಪಿತೃಕ | ಅಜೀವತ್ ಪಿತೃಕ | | |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ಸೋದರನ ಮೊಮ್ಮಗನ(ಮಗನಮಗ) ಮೊಮ್ಮಗಳು(ಮಗನ ಮಗಳು): ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ಸೋದರನ ಮೊಮ್ಮಗನ(ಮಗನ ಮಗ) ಮೊಮ್ಮಗನ(ಮಗನ ಮಗ) ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತಿ.) | 10ದಿನ | – |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ಸೋದರನ ಮೊಮ್ಮಗನ(ಮಗನಮಗ) ಮೊಮ್ಮಗನ(ಮಗನ ಮಗ)ಮಗಳು:ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ತಂದೆಯ ಸೋದರನ ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತಿ.) | 10ದಿನ | – |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ)ತಂದೆಯ ಸೋದರನಮಗಳು:ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ತಂದೆಯ ಸೋದರನ ಮೊಮ್ಮಗ (ಮಗನ ಮಗ)ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತಿ.) | 10ದಿನ | – |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ತಂದೆಯ ಸೋದರನ ಮೊಮ್ಮಗಳು (ಮಗನ ಮಗಳು) :ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ತಂದೆಯ ಸೋದರನ ಮೊಮ್ಮಗನ (ಮಗನ ಮಗ)ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತಿ.) | 10ದಿನ | – |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ತಂದೆಯ ಸೋದರನ ಮೊಮ್ಮಗನ (ಮಗನ ಮಗ)ಮಗಳು: ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತಿ.) | –<br>10ದಿನ | –<br>– |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ತಂದೆಯ ಸೋದರನ ಮೊಮ್ಮಗನ (ಮಗನ ಮಗ)ಮೊಮ್ಮಗ(ಮಗನ ಮಗ) ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತಿ.) | 10ದಿನ | – |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ತಂದೆಯ ಸೋದರನ ಮೊಮ್ಮಗನ (ಮಗನ ಮಗ)ಮೊಮ್ಮಗಳು(ಮಗನ ಮಗಳು):<br>ವಿವಾಹಿತೆ<br>ಅವಿವಾಹಿತೆ | <br>–<br>10ದಿನ | <br>–<br>– | <br>–<br>10ದಿನ | <br>–<br>10ದಿನ(ತಿ.) | <br>–<br>10ದಿನ | <br>–<br>– |

| | ಆಶೌಚ (ಸೂತಕ) ಇರಬೇಕಾದವರು | | | | | |
|---|---|---|---|---|---|---|
| | ಗಂಡಸರು | | | | ಹೆಂಗಸರು | |
| | ಅನುಪನೀತ | ಬ್ರಹ್ಮಚಾರಿ | ಗೃಹಸ್ಥರು | | ಅವಿವಾಹಿತೆ | ವಿವಾಹಿತೆ |
| ಮೃತರು | | | ಜೀವತ್ ಪಿತೃಕ | ಅಜೀವತ್ ಪಿತೃಕ | | |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ತಂದೆಯ ಸೋದರನ ಮೊಮ್ಮಗನ (ಮಗನ ಮಗ)ಮೊಮ್ಮಗನ(ಮಗನ ಮಗ) ಮಗ ಮತ್ತು ಅವನ ಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ತಾತನ(ತಂದೆಯ ತಂದೆ)ತಾತನ(ತಂದೆಯ ತಂದೆ) ತಂದೆಯ ಸೋದರನ ಮೊಮ್ಮಗನ (ಮಗನ ಮಗ)ಮೊಮ್ಮಗನ(ಮಗನ ಮಗ) ಮಗಳು: ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತ್ರಿ.) | –<br>10ದಿನ | –<br>– |
| ಸೋದರನ ಮೊಮ್ಮಗನ(ಮಗನ ಮಗ) ಮೊಮ್ಮಗ(ಮಗನ ಮಗ)ಮತ್ತು ಅವನಹೆಂಡತಿ | 10ದಿನ | – | 10ದಿನ | 10ದಿನ(ತ್ರಿ.) | 10ದಿನ | – |
| ಸೋದರನ ಮೊಮ್ಮಗನ(ಮಗನ ಮಗ) ಮೊಮ್ಮಗಳು(ಮಗನ ಮಗಳು): ವಿವಾಹಿತೆ<br>ಅವಿವಾಹಿತೆ | –<br>10ದಿನ | –<br>– | –<br>10ದಿನ | –<br>10ದಿನ(ತ್ರಿ.) | –<br>10ದಿನ | –<br>– |
| ಮೊಮ್ಮಗನ(ಮಗನ ಮಗ)ಮೊಮ್ಮಗ(ಮಗನ ಮಗ)ಮತ್ತು ಅವನ ಹೆಂಡತಿ | – | – | 10ದಿನ | 10ದಿನ(ತ್ರಿ.) | – | 10ದಿನ |
| ಮೊಮ್ಮಗನ(ಮಗನ ಮಗ)ಮೊಮ್ಮಗಳು(ಮಗನ ಮಗಳು): ವಿವಾಹಿತೆ<br>ಅವಿವಾಹಿತೆ | –<br>– | –<br>– | –<br>10ದಿನ | –<br>10ದಿನ(ತ್ರಿ.) | –<br>– | –<br>10ದಿನ |

ಮೇಲೆ 10ದಿನ ದಾಯಾದಿಗಳಿಗೆ ಹೇಳಿರುವ ಸಂಬಂಧಗಳಂತೆ 3ದಿನ ದಾಯಾದಿಗಳಿಗೂ ಮುಂದಿನ 7 ತಲೆಮಾರಿಗೆ ಅನ್ವಯಿಸಿಕೊಳ್ಳುವುದು.

ಇದುವರೆಗೆ ಹೇಳಿರುವ ಸಂಬಂಧಗಳನ್ನು ಬಿಟ್ಟು ಉಳಿದ ಸಂಬಂಧಗಳಿಗೆ ಆಶೌಚವಿಲ್ಲಾ.

## ಕೆಲವು ಉಪಯುಕ್ತ ವಿಷಯಗಳು

**ಸಪಿಂಡರು:** (10 ರಾತ್ರಿ ಆಶೌಚದ ದಾಯಾದಿಗಳು) ಮೂಲಪುರುಷನಿಂದ ಏಳುತಲೆಮಾರಿನವರೆಗೆ ಇರುವ ಗೃಹಸ್ಥ, ಬ್ರಹ್ಮಚಾರಿ,ಅನುಪನೀತ,ವಿವಾಹವಾಗದ ಹೆಣ್ಣುಮಗಳು ಮತ್ತು ಸೊಸೆಯರು. ಆಶೌಚ ಇರುವವರು ತಮಗೂ ಮೃತರಿಗೂ ಇರುವ ಮೂಲಪುರುಷರನ್ನು ತಿಳಿದುಕೊಂಡು ತಲೆಮಾರನ್ನು ನಿರ್ಧರಿಸಬೇಕು.ಮೂಲಪುರುಷನ ಮೊಮ್ಮಗನ ಮೊಮ್ಮಗನ ಮೊಮ್ಮಗನ ವರೆಗೆ ಏಳು ತಲೆಮಾರು. ಆಶೌಚ ಇರುವವರ ತಾತನ ತಾತನ ತಾತನ ವರೆಗೆ ಏಳು ತಲೆಮಾರು. ಆಶೌಚ ಇರುವವರಿಗೂ ಮೃತರಿಗೂ ಇರುವ ಸಂಬಂಧದಿಂದತಲೆಮಾರಿನ ಮೂಲಪುರುಷ ವ್ಯತ್ಯಾಸವಾಗುವುದುಂಟು.

| | |
|---|---|
| ಮೂಲ ಪುರುಷ | ತನ್ನ(ಅನುಪನೀತ,ಗೃಹಸ್ಥ,ಅವನ ಹೆಂಡತಿ,ಅವಿವಾಹಿತೆ) |
| । | । |
| ಮೊಮ್ಮಗನ(ಮಗನ ಮಗ) | ತಾತನ(ತಂದೆಯ ತಂದೆ) |
| । | । |
| ಮೊಮ್ಮಗನ(ಮಗನ ಮಗ) | ತಾತನ(ತಂದೆಯ ತಂದೆ) |
| । | । |
| ಮೊಮ್ಮಗ(ಮಗನ ಮಗ/ಅವಿವಾಹಿತ ಮಗಳು)<br>(ಅನುಪನೀತ,ಗೃಹಸ್ಥ, ಅವನ ಹೆಂಡತಿ,ಅವಿವಾಹಿತೆ) | ತಾತ(ತಂದೆಯ ತಂದೆ) |

**ಸೋದಕರು:**(3ರಾತ್ರಿ ಆಶೌಚದ ದಾಯಾದಿಗಳು) ಮೂಲಪುರುಷನಿಂದ ಎರಡನೆಯ ಏಳುತಲೆಮಾರಿನವರೆಗೆ ಇರುವ ಗೃಹಸ್ಥ, ಬ್ರಹ್ಮಚಾರಿ, ಅನುಪನೀತ, ವಿವಾಹವಾಗದ ಹೆಣ್ಣುಮಗಳು ಮತ್ತು ಸೊಸೆಯರು. ಮೊದಲನೆಯ ಏಳುತಲೆಮಾರು ಮುಗಿದ ನಂತರ ಬರುವ ಏಳುತಲೆಮಾರಿನವರು.

ಮೂಲ ಪುರುಷ — ತನ್ನ(ಅನುಪನೀತ,ಗೃಹಸ್ಥ,ಅವನ ಹೆಂಡತಿ,ಅವಿವಾಹಿತೆ)

| |

ಮೊಮ್ಮಗನ(ಮಗನ ಮಗ) — ತಾತನ(ತಂದೆಯ ತಂದೆ)

| |

ಮೊಮ್ಮಗನ(ಮಗನ ಮಗ) — ತಾತನ(ತಂದೆಯ ತಂದೆ)

| |

ಮೊಮ್ಮಗ(ಮಗನ ಮಗ/ಅವಿವಾಹಿತ ಮಗಳು) — ತಾತ(ತಂದೆಯ ತಂದೆ)

(ಅನುಪನೀತ,ಗೃಹಸ್ಥ, ಅವನ ಹೆಂಡತಿ,ಅವಿವಾಹಿತೆ)

**ಗೃಹಸ್ಥ:**ಮದುವೆಯಾಗಿರುವ ಗಂಡಸು. **ಬ್ರಹ್ಮಚಾರಿ:**ಉಪನಯನವಾಗಿ ಮದುವೆಯಾಗದವನು.
**ಅನುಪನೀತ:**ಉಪನಯನ ಆಗದ ಗಂಡಸು.
**ವಿವಾಹಿತೆ:**ಮದುವೆಯಾಗಿರುವ ಹೆಂಗಸು. **ಅವಿವಾಹಿತೆ:** ಮದುವೆಯಾಗದೇ ಇರುವ ಹೆಂಗಸು.
**ಜೀವತ್ ಪಿತೃಕ:** ತಂದೆ ಬದುಕಿರುವವರು. **ಅಜೀವತ್ ಪಿತೃಕ:**ತಂದೆ ಮರಣಹೊಂದಿರುವವರು.
**ಜನಕಪಿತಾ:** ಬೇರೆ ಮನೆಗೆ ದತ್ತಾಗಿರುವವರಿಗೆ ಹೆತ್ತ ತಂದೆ. **ಜನಕಮಾತಾ:** ಬೇರೆ ಮನೆಗೆ ದತ್ತಾಗಿರುವವರಿಗೆ ಹೆತ್ತ ತಾಯಿ.
**ಕ್ಷೌ:**ಎಂದರೆ ಕ್ಷೌರ ಮಾಡಿಸಿಕೊಳ್ಳುವುದು. ಹಿರಿಯರು ಮೃತಪಟ್ಟಾಗ ಮಾತ್ರ ಕ್ಷೌರ ಉಂಟು. ಕಿರಿಯರು ಮೃತಪಟ್ಟಾಗ ಹಿರಿಯರಿಗೆ ಕ್ಷೌರವಿಲ್ಲ. ಆದರೆ ಅಣ್ಣನ ಹೆಂಡತಿ, ಸೋದರಮಾವ, ಸೋದರಮಾವನ ಹೆಂಡತಿ, ಚಿಕ್ಕಮ್ಮ(ತಾಯಿಯ ತಂಗಿ),ಸೋದರತ್ತೆ, ಚಿಕ್ಕಪ್ಪ(ತಂದೆಯ ತಮ್ಮ), ತಂದೆಯ ತಮ್ಮನ ಹೆಂಡತಿ, ಇವರುಗಳು ತಮಗಿಂತ ಕಿರಿಯರಾಗಿದ್ದರೂ ಅಜೀವತ್ ಪಿತೃಕರಿಗೆ ಕ್ಷೌರ ಉಂಟು. ನಮಸ್ಕಾರ ಮಾಡುವ ಯೋಗ್ಯತೆ ಇರುವವರಿಗೆ ಮಾತ್ರ ಕ್ಷೌರ ಉಂಟು.
**ಕ್ಷೌ.ತಿ.:**ಎಂದರೆ ಕ್ಷೌರ ಮತ್ತು ತಿಲೋದಕ ಎರಡೂ ಉಂಟು.ಮೊದಲು ಕ್ಷೌರ ನಂತರ ತಿಲೋದಕ.
**ತಿ.ಮಾತ್ರ:** ಎಂದರೆ ತಿಲೋದಕ ಮಾತ್ರ ಉಂಟು, ಕ್ಷೌರವಿಲ್ಲ.

10ದಿನದ ಆಶೌಚಕ್ಕೆ ಕ್ಷೌರ, ತಿಲೋದಕ ಹೇಳಿರುವಲ್ಲಿ 10ನೇ ದಿನ ಕ್ಷೌರ, ತಿಲೋದಕ. ಆದರೆ ದಾಯಾದಿಗಳ ವಿಷಯದಲ್ಲಿ **ಮಂಡಯಮ್‌ಶ್ರೀವೈಷ್ಣವರಲ್ಲಿ ಮಾತ್ರ** 10ನೇ ದಿನ ಶುಕ್ರವಾರ ಬಂದರೆ ಹಿಂದಿನ ದಿನ ಅಂದರೆ 9ನೇ ದಿನ ಕ್ಷೌರ ಆಚರಣೆಯಲ್ಲಿದೆ.ತಿಲೋದಕ ಮಾತ್ರ 10ನೇ ದಿನವೇ ಬಿಡಬೇಕು. **ಉಳಿದ ಶ್ರೀವೈಷ್ಣವರಲ್ಲಿ** 10ನೇ ದಿನವೇ ಕ್ಷೌರ ಮತ್ತು ತಿಲೋದಕಎರಡೂ ಆಚರಣೆಯಲ್ಲಿದೆ. **ಕರ್ತಾಗೆ** ಅಂದರೆ ಮಗನಿಗೆ ತಂದೆಯ ಅಥವಾ ತಾಯಿಯ ವಿಷಯದಲ್ಲಿ ಯಾವಾಗಲೂ ಯಾವ ದಿನವಾದರೂ 10ನೇ ದಿನವೇ ಕ್ಷೌರ.

3ದಿನದ ಆಶೌಚಕ್ಕೆ ಕ್ಷೌರ ತಿಲೋದಕ ಹೇಳಿರುವಲ್ಲಿ 3ನೇ ದಿನ ಕ್ಷೌರ ಮತ್ತು ತಿಲೋದಕ.

10ದಿನಗಳ ಆಶೌಚವು 10ನೇ ದಿನ ಅಥವಾ ಅದಕ್ಕೂ ಮೊದಲು ಇನ್ಯಾವ ದಿನಗಳಲ್ಲಿ ತಿಳಿದರೂ 11ನೇ ದಿನ ಸ್ನಾನದಿಂದ ನಿವೃತ್ತಿ ಹೊಂದುವುದು.

11ನೇ ದಿನದಿಂದ 3 ತಿಂಗಳೊಳಗೆ ತಿಳಿದರೆ 3ದಿನ ಆಶೌಚ. 3ನೇ ದಿನ ಕ್ಷೌರ ತಿಲೋದಕ.

4ನೇ ತಿಂಗಳಿನಿಂದ 6 ತಿಂಗಳೊಳಗೆ ತಿಳಿದರೆ 1 1/2(ಒಂದೂವರೆ) ದಿನ ಅಂದರೆ ಪಕ್ಷಿಣೀ ಆಶೌಚ. 2ನೇದಿನ ಕ್ಷೌರ, ತಿಲೋದಕ. 7ನೇ ತಿಂಗಳಿನಿಂದ ವರ್ಷದ ಒಳಗೆ ತಿಳಿದರೆ 1 ದಿನ ಆಶೌಚ – ಅಂದೇ ಕ್ಷೌರ, ತಿಲೋದಕ.

1 ವರ್ಷದ ನಂತರ ತಿಳಿದರೆ ಸ್ನಾನದಿಂದ ಶುದ್ಧಿ; ಆಶೌಚವಿಲ್ಲ.

ಮಂಡಯಮ್ ಶ್ರೀವೈಷ್ಣವರಲ್ಲಿ ಮಾತ್ರ 10ದಿನ ಆಶೌಚವು 11ನೇ ದಿನದಿಂದ 6 ತಿಂಗಳೊಳಗೆ ತಿಳಿದರೆ 3ದಿನ ಆಶೌಚ ಈಗ ಆಚರಣೆಯಲ್ಲಿದೆ. 3ನೇ ದಿನ ಕ್ಷೌರ, ತಿಲೋದಕ.

3ದಿನಗಳ ಆಶೌಚವು 3ದಿನಗಳ ನಂತರ 10ದಿನಗಳ ಒಳಗೆ ತಿಳಿದರೆ 1 ದಿನ ಆಶೌಚ. ಅಂದೇ ಕ್ಷೌರ,ತಿಲೋದಕ. 10ದಿನಗಳ ನಂತರ ತಿಳಿದರೆ ಸ್ನಾನದಿಂದ ಶುದ್ಧಿ.

ಪಕ್ಷಿಣೀ (ಒಂದೂವರೆ ದಿನ) ಆಶೌಚವು 3ನೇ ದಿನದಿಂದ 10ದಿನಗಳ ಒಳಗೆ ತಿಳಿದರೆ 1 ದಿನ ಆಶೌಚ.

ಹೆಂಡತಿ, ಮಗ, ತಮ್ಮ ಮುಂತಾದ ತನಗಿಂತ ಕಿರಿಯರ ಮರಣದಲ್ಲಿ ತಾನೇ ಕರ್ತೃವಾದರೂ ಕ್ಷೌರವಿಲ್ಲಾ. ನಮಸ್ಕಾರ ಮಾಡುವ ಯೋಗ್ಯತೆ ಇರುವವರಿಗೆ ಮಾತ್ರ ಕ್ಷೌರ ಉಂಟು.

ಗರ್ಭದೀಕ್ಷೆಯಲ್ಲಿರುವಾಗ ತಂದೆ, ತಾಯಿ ಅಥವಾ ಇನ್ನಾರಿಗಾದರೂ ತಾನೇ ಶಾಸ್ತ್ರ ಸಮ್ಮತವಾದ ಕರ್ತೃವಾಗಬೇಕಾಗಿದ್ದಲ್ಲಿ ಮಾತ್ರ ಕ್ಷೌರ ಉಂಟು. ಉಳಿದ ಸಂಬಂಧಗಳಿಗೆ ಕ್ಷೌರವಿಲ್ಲಾ. ತಿಲೋದಕ ಮಾತ್ರ.

ಗರ್ಭದೀಕ್ಷೆ ಎಂದರೆ ತನ್ನ ಹೆಂಡತಿ ಗರ್ಭಿಣಿಯಾಗಿರುವಾಗ 7ನೇ ತಿಂಗಳಿನಿಂದ ಮಗುವು ಹುಟ್ಟಿದ 10ನೇ ದಿನದವರೆಗೆ ಕ್ಷೌರ ಮಾಡಿಸದೇ ಇರುವುದು.

ತನ್ನ ತಂದೆ, ತಾಯಿ ಮೃತರಾದ ವರ್ಷಗಳಲ್ಲಿ ದೀಕ್ಷೆ ಬಿಡುವಾಗ (ಕ್ಷೌರ ಮಾಡಿಸದೇ ಇರುವಾಗ)ಉಳಿದ ಸಂಬಂಧಗಳ ಮರಣದಲ್ಲಿ ಕ್ಷೌರವಿಲ್ಲಾ. ತಿಲೋದಕ ಮಾತ್ರ. ಬೇರೆ ಕೆಲವು ಕರ್ತೃತ್ವದ ನಿಮಿತ್ತ ದೀಕ್ಷೆಯಲ್ಲೂ ಕ್ಷೌರವಿಲ್ಲಾ, ತಿಲೋದಕ ಮಾತ್ರ.

**ದೀಕ್ಷೆಯ ಅವಧಿ:** ತಂದೆ ಮತ್ತು ತಾಯಿ – 1ವರ್ಷ.

ಅಣ್ಣ, ಚಿಕ್ಕಪ್ಪ, ದೊಡ್ಡಪ್ಪ(ತಂದೆಯ ಸಹೋದರರು), ಮಾತಾಮಹ, ಮಾತಾಮಹಿ, ಸೋದರಮಾವ – 6 ತಿಂಗಳು. 6 ತಿಂಗಳ ನಂತರ ದೀಕ್ಷೆ ತೆಗೆದರೂ ವರ್ಷಾಂತ್ಯದವರೆಗೆ ಉಳಿದ ನಿಯಮಗಳಾದ ನಿಮಂತ್ರಣ(ಬ್ರಾಹ್ಮಣಾರ್ಥ) ಇಲ್ಲದಿರುವುದು, ಮಾಸಿಕ ನಡೆಸುವುದು ಮುಂತಾದ ನಿಯಮಗಳು ಅನ್ವಯಿಸುವುದು.

ಮೇಲೆ ಹೇಳಿರುವ ದೀಕ್ಷೆಯ ಅವಧಿಯಲ್ಲಿ ಉಪಾಕರ್ಮ ಬಂದರೆ ಬ್ರಹ್ಮಚಾರಿಗೆ ಉಪಾಕರ್ಮ ನಿಮಿತ್ತ ಕ್ಷೌರವಿಲ್ಲಾ.

ಒಂದು 10ದಿನದ ಮೃತಾಶೌಚದ ಮಧ್ಯೆ ಮತ್ತೊಂದು 10ದಿನದ ಮೃತಾಶೌಚ ಬಂದರೆ ಮೊದಲನೆಯದರ ಜೊತೆ ಎರಡನೆಯ ಆಶೌಚ ನಿವೃತ್ತಿಯಾಗುವುದು. ಹತ್ತನೆಯ ದಿನ ಎರಡನೇ ಆಶೌಚ ಬಂದರೆ ಹತ್ತನೆಯ ದಿನದ ನಂತರ ಎರಡು ದಿನಗಳು ಎರಡನೇ ಆಶೌಚಕ್ಕಾಗಿ ಆಶೌಚವಿರಬೇಕು. 10ನೇ ದಿನದ ರಾತ್ರಿಯ ಎರಡನೇ ಯಾಮದಲ್ಲಿ ಅಥವಾ ಮಾರನೇದಿನ ಸೂರ್ಯೋದಯಕ್ಕೆ ಮೊದಲು ಎರಡನೇ ಆಶೌಚ ಬಂದರೆ ಮುಂದೆ 3 ದಿನ ಎರಡನೇ ಆಶೌಚಕ್ಕಾಗಿ ಆಶೌಚವಿರಬೇಕು.

10ದಿನದ ಮೃತಾಶೌಚವಿರುವಾಗ 3ದಿನಗಳ ಆಶೌಚ ಅಥವಾ ಪಕ್ಷಿಣೀ ಆಶೌಚ ಬಂದರೆ 10ನೇ ದಿನದ ಆಶೌಚದ ಜೊತೆಗೆ ಇವುಗಳೂ ನಿವೃತ್ತಿಯಾಗುವುದು. ಮೃತಾಶೌಚದ ಮಧ್ಯದಲ್ಲಿ ಜಾತಾಶೌಚ ಬಂದರೆ ಮೃತಾಶೌಚದ ಜೊತೆ ಜಾತಾಶೌಚವೂ ನಿವೃತ್ತಿಯಾಗುವುದು. ಆದರೆ ಜಾತಾಶೌಚದ ಜೊತೆ ಮೃತಾಶೌಚ ಬಂದರೆ ಮೃತಾಶೌಚ ಮುಗಿಯುವವರೆಗೆ ಆಶೌಚವಿರಬೇಕು.

3ದಿನ ಆಶೌಚ ಅಥವಾ ಪಕ್ಷಿಣೀ ಆಶೌಚದ ನಡುವೆ 10ದಿನದ ಮೃತಾಶೌಚ ಬಂದರೆ 10ದಿನದ ಆಶೌಚ ಮುಗಿಯುವವರೆಗೆ ಆಶೌಚವಿರಬೇಕು.

**ಶ್ರೀವೈಷ್ಣವರಲ್ಲಿ ರಾತ್ರಿ ಜನನ, ಮರಣ ಮತ್ತು ರಜೋದರ್ಶನವು(ಮುಟ್ಟಾಗುವುದು) ಸಂಭವಿಸಿದಲ್ಲಿ ಆಶೌಚದ ದಿನಗಣನೆಯನ್ನು ಈ ಕೆಳಕಂಡಂತೆ ಮಾಡಬೇಕು.** ಸೂರ್ಯಾಸ್ತದ ನಂತರ 1ಘಂ. 30ನಿಮಿಷ (ಮೂರುಮುಕ್ಕಾಲು ಘಳಿಗೆಗಳು) ಸಾಯಂ ಸಂಧ್ಯೆಯಾಗುತ್ತದೆ ಮತ್ತು ಸೂರ್ಯೋದಯಕ್ಕೆ ಮೊದಲು 1ಘಂ. 30ನಿಮಿಷಗಳು (ಮೂರುಮುಕ್ಕಾಲು ಘಳಿಗೆಗಳು) ಪ್ರಾತಸ್ಸಂಧ್ಯೆಯಾಗುತ್ತದೆ. ಈ ಎರಡು ಸಂಧ್ಯಾಕಾಲವನ್ನು ಬಿಟ್ಟು ಉಳಿಕೆ ಇರುವ ಕಾಲವನ್ನು ರಾತ್ರಿ ಎಂದೂ 'ತ್ರಿಯಾಮಾ' ಎಂದೂ ಕರೆಯುತ್ತಾರೆ. (ಅಂದರೆ ಮೂರು ಯಾಮಗಳಿಂದ ಕೂಡಿದ್ದು) ಆದ್ದರಿಂದ ಆಯಾದಿನದ ಸೂರ್ಯಾಸ್ತದ ನಂತರ 1–30ಘಂಟೆ ಕಾಲವನ್ನು ಬಿಟ್ಟು ಮತ್ತು ಮಾರನೇದಿನದ ಸೂರ್ಯೋದಯಕ್ಕೆ ಮೊದಲು 1–30 ಘಂಟೆ ಕಾಲವನ್ನು ಬಿಟ್ಟು ಉಳಿದ ಕಾಲವನ್ನು 3 ಭಾಗಮಾಡಿ ಅದರಲ್ಲಿ ಮೊದಲೆರಡು ಭಾಗಗಳನ್ನು ಕಳೆದು ಮೂರನೇ ಭಾಗದಲ್ಲಿ ಆದರೆ ಮಾರನೇ ದಿನದ ಆಶೌಚದ ಗಣನೆಗೆ ತೆಗೆದುಕೊಳ್ಳಬೇಕು. ಮೊದಲೆರಡು ಭಾಗದಲ್ಲಿಯಾಗಿದ್ದರೆ ಹಿಂದಿನ ದಿನದ ಆಶೌಚದ ಗಣನೆಗೆ ತೆಗೆದುಕೊಳ್ಳಬೇಕು. ರಾತ್ರಿಯ 3ನೇ ಭಾಗವು ಸಾಮಾನ್ಯವಾಗಿ ರಾತ್ರಿ 1–45 ರಿಂದ 2–15ರ ಒಳಗೆ ಆಯಾದಿನದ ಸೂರ್ಯಾಸ್ತ ಮತ್ತು ಮಾರನೆಯ ದಿನದ ಸೂರ್ಯೋದಯವನ್ನು ಅನುಸರಿಸಿ ಪ್ರಾರಂಭವಾಗುತ್ತದೆ. **ಸಾಮಾನ್ಯವಾಗಿ ಎಲ್ಲಾ ಶ್ರೀವೈಷ್ಣವರು ಜನನ, ಮರಣ ಮತ್ತು ರಜೋದರ್ಶನಕ್ಕೂ**(ಮುಟ್ಟಾಗುವುದಕ್ಕೂ) ಸಹ ಆಶೌಚದ ದಿನ ಗಣನೆಗೆ ಮೇಲೆ ತಿಳಿಸಿರುವ ರಾತ್ರಿಯ 3 ಭಾಗದ ಪದ್ಧತಿಯನ್ನು ಅನುಸರಿಸುತ್ತಾರೆ.

**ಆದರೆ ಮಂಡಯಂ ಶ್ರೀವೈಷ್ಣವರಲ್ಲಿ** ರಜೋ ದರ್ಶನದ ಆಶೌಚಕ್ಕೆ (ಮುಟ್ಟಾಗುವುದು) ಮಾತ್ರ ಮೇಲೆ ಹೇಳಿರುವ ರಾತ್ರಿಯನ್ನು ಮೂರು ಭಾಗ ಮಾಡುವ ಪದ್ಧತಿಯನ್ನು ಅನುಸರಿಸುತ್ತಾರೆ. **ಮಂಡಯಂ ಶ್ರೀವೈಷ್ಣವರಲ್ಲಿ ಜನನ ಅಥವಾ ಮರಣವು** ಸಂಭವಿಸುವ ಕಾಲವು ಆಯಾ ದಿನದ ಸೂರ್ಯೋದಯಕ್ಕೆ ಮೊದಲು 1 ಘಂಟೆ 36 ನಿಮಿಷ ( ಅಂದರೆ 4 ಘಳಿಗೆ) ಒಳಗೆ ಆಗಿದ್ದಲ್ಲಿ ಆಶೌಚಕ್ಕೆ ಅಂದಿನ ಗಣನೆಗೆ ತೆಗೆದುಕೊಳ್ಳಬೇಕು. ಅದಕ್ಕೂ ಮೊದಲು ಆಗಿದ್ದರೆ ಹಿಂದಿನ ದಿನದ ಆಶೌಚದ ಗಣನೆಗೆ ತೆಗೆದುಕೊಳ್ಳಬೇಕು. ಈ ಕಾಲವನ್ನು ಅರುಣೋದಯಕಾಲವೆಂದು ಶಾಸ್ತ್ರಗಳಲ್ಲಿ ಹೇಳಿದೆ.

**ಗ್ರಂಥಗಳ ಆಧಾರ :**1. ಪಿತೃಮೇಧಸಾರ ಮತ್ತು ಆಶೌಚ ಶತಕ (ಗ್ರಂಥ ಕರ್ತಾ–ವೈದಿಕ ಸಾರ್ವಭೌಮ ತೋಳಪ್ಪರ್ ಎಂಬ ಶ್ರೀನಿವಾಸಾಚಾರ್ಯರು).

2. ವೈದ್ಯನಾಥೀಯ ಶ್ರಾದ್ಧ ಕಾಂಡ ಮತ್ತು ಆಶೌಚ ಕಾಂಡ (ಗ್ರಂಥ ಕರ್ತಾ–ವೈದ್ಯನಾಥ ದೀಕ್ಷಿತರು).

3. ಇದಲ್ಲದೆ ಕರ್ನಾಟಕ ದೇಶದ ಮೇಲುಕೋಟೆ, ಮೈಸೂರು ಮತ್ತು ಬೆಂಗಳೂರು ಸುತ್ತಮುತ್ತಲಿನ ಶ್ರೀವೈಷ್ಣವರಲ್ಲಿ ಈಗ ವಾಡಿಕೆಯಲ್ಲಿರುವ ಸಂಪ್ರದಾಯವನ್ನೂ ಅನುಸರಿಸಿ ತಿಳಿಸಲಾಗಿದೆ.

**ವೈದಿಕ ಸಾರ್ವಭೌಮ ತೊಳಪ್ಪರ್‌ರವರು ಆಶೌಚ ಶತಕದಲ್ಲಿ ಕೆಳಕಂಡಂತೆ ತಿಳಿಸಿರುತ್ತಾರೆ:**

1. ಬ್ರಾಹ್ಮಣರಲ್ಲಿ ಸಪಿಂಡರುಗಳಿಗೆ ಜನನದಲ್ಲಿ ಅಥವಾ ಮರಣದಲ್ಲಿ 10ದಿನಗಳ ಆಶೌಚವೆಂದೂ, ಕ್ಷತ್ರಿಯರಿಗೆ 16ದಿನಗಳೆಂದೂ, ವೈಶ್ಯರಿಗೆ 20ದಿನಗಳೆಂದೂ, ಶೂದ್ರರಿಗೆ ಒಂದು ತಿಂಗಳೆಂದೂ ಅನೇಕ ಋಷಿಗಳ ಮತವೆಂದೂ ತಿಳಿಸಿರುತ್ತಾರೆ.

2. ಶ್ರೀವೈಷ್ಣವ ಆಚಾರ್ಯರಲ್ಲಿ ಶಂಖ,ಚಕ್ರಾಂಕನ(ಸಮಾಶ್ರಯಣ) ಮಾಡಿಕೊಂಡಿರುವ ಶೂದ್ರರಿಗೆ ಸಪಿಂಡರಲ್ಲಿ ಜನನ, ಮರಣಗಳಾದರೆ 15ದಿನಗಳು ಆಶೌಚವೆಂದು ತಿಳಿಸಿರುತ್ತಾರೆ.

**ಪಿತೃಮೇಧಸಾರ : – ಕರ್ತೃ ಕ್ರಮ:**ಪುತ್ರಃ ಸಪತ್ನೀಪುತ್ರಃ ಪುತ್ರಿಕಾಪುತ್ರಃ ದತ್ತಃ ಪೌತ್ರಃ ಪ್ರಪೌತ್ರಃ ಧನಹಾರೀದೌಹಿತ್ರಃ ದೌಹಿತ್ರಃ ಪತ್ನೀ ಪತಿಃ ದುಹಿತಾ ಭ್ರಾತಾ ತತ್ಪುತ್ರಃ ಅಸೋದರಭ್ರಾತಾ ತತ್ಪುತ್ರಃ ಪಿತಾ ಮಾತಾ ಸ್ನುಷಾ ಸ್ವಸಾ ಭಾಗಿನೇಯಃ ಸಪಿಂಡಃ ಮಾತೃಸಪಿಂಡಃ ಸೋದಕಃ ಸಗೋತ್ರಃ ಶಿಷ್ಯಃ ಋತ್ವಿಕ್ ಆಚಾರ್ಯಃ ಜಾಮಾತಾ ಸಖಾ ರಾಜಾಚೇತಿ ಪೂರ್ವಪೂರ್ವಸ್ಯ ಅಸನ್ನಿಧಾನೇ ನಾಶೇವಾ ಪರಃ ಪರಃ ಕರ್ತಾ.

ಕರ್ತೃ ಕ್ರಮ (ಪಿತೃಮೇಧಸಾರ): ಮರಣಹೊಂದಿರುವವರಿಗೆ:

(ಕರ್ತೃಗೆ ಕ್ಷೌರ ಉಂಟು ಅಥವಾ ಇಲ್ಲಾ ಎನ್ನುವುದನ್ನು ತಿಳಿಸಿದೆ. ತಮಗಿಂತ ವಯಸ್ಸಿನಲ್ಲಿ ಹಿರಿಯರಿಗೂ ಅಥವಾ ನಮಸ್ಕಾರ ಮಾಡುವ ಯೋಗ್ಯತೆ ಇರುವವರಿಗೆ ಮಾತ್ರ ಕ್ಷೌರ ಉಂಟೆಂದು ಅಲ್ಲಲ್ಲಿ ತಿಳಿಸಿದೆ)

1. ಮಗ (ಕ್ಷೌರ ಉಂಟು).
2. ಗಂಡನ ಮತ್ತೊಂದು ಹೆಂಡತಿಯ ಮಗ (ಕ್ಷೌರ ಉಂಟು).
3. ಹೆಣ್ಣು ಮಕ್ಕಳು ಇದ್ದು ಮಗ ಇಲ್ಲದಿರುವಾಗ ಯಾವುಳಾದರೂ ಒಬ್ಬ ಮಗಳನ್ನು ಧಾರೆ ಕೊಡುವಾಗ ಇವಳಿಂದ ಹುಟ್ಟುವ ಸಂತಾನವೇ ತನ್ನ ಕ್ರಿಯೆ ಮಾಡಬೇಕೆಂದು ತೀರ್ಮಾನಿಸಿದ್ದರೆ ಅಂತಹವಳ ಮಗ (ಪುತ್ರಿಕಾ ಪುತ್ರ) (ಕ್ಷೌರ ಉಂಟು).
4. ದತ್ತು ತೆಗೆದುಕೊಂಡಿರುವ ಮಗ (ಕ್ಷೌರ ಉಂಟು).
5. ಮೊಮ್ಮಗ (ಮಗನ ಮಗ) (ಕ್ಷೌರ ಉಂಟು).
6. ಮೊಮ್ಮಗನ ಮಗ (ಮಗನ ಮಗನ ಮಗ) (ಕ್ಷೌರ ಉಂಟು).
7. ಧನವನ್ನು(ಆಸ್ತಿಯನ್ನು) ಯಾವ ದೌಹಿತ್ರ(ಮಗಳ ಮಗ)ನಿಗೆ ನೀಡಿ ಧನಹಾರಿ ದೌಹಿತ್ರ ಎಂದು ನಿಯಮಿಸಿದ್ದರೆ ಅವನು (ಕ್ಷೌರ ಉಂಟು).
8. ಮಗಳ ಮಗ (ದೌಹಿತ್ರ) (ಅನೇಕರಿದ್ದರೆ ದೊಡ್ಡವನು) (ಕ್ಷೌರ ಉಂಟು).
9. ಹೆಂಡತಿ (ಕ್ಷೌರ ಇಲ್ಲಾ).
10. ಗಂಡ (ಕ್ಷೌರ ಇಲ್ಲಾ).
11. ಹೆಣ್ಣುಮಗಳು (ಕ್ಷೌರ ಇಲ್ಲಾ).
12. ತಮ್ಮ ಇಲ್ಲದಿದ್ದರೆ ಅಣ್ಣ (ಮೃತರು ಕರ್ತೃಗೆ ತಮ್ಮನಾದರೆ ಕ್ಷೌರ ಇಲ್ಲಾ;ಮೃತರು ಕರ್ತೃಗೆ ಅಣ್ಣನಾದರೆ ಕ್ಷೌರ ಉಂಟು).
13. ತಮ್ಮನ ಮಗ ಅಥವಾ ಅಣ್ಣನ ಮಗ (ಕ್ಷೌರ ಉಂಟು).
14. ತನ್ನ ತಂದೆಯ ಮತ್ತೊಂದು ಹೆಂಡತಿಯ ಮಗ (ಮೃತರು ಕರ್ತೃಗಿಂತ ಕಿರಿಯರಾದರೆ ಕ್ಷೌರ ಇಲ್ಲಾ; ಮೃತರು ಕರ್ತೃಗಿಂತ ಹಿರಿಯರಾದರೆ ಕ್ಷೌರ ಉಂಟು).

15. ತನ್ನ ತಂದೆಯ ಮತ್ತೊಂದು ಹೆಂಡತಿಯ ಮಗನ ಮಗ (ಕ್ಷೌರ ಉಂಟು).
16. ತಂದೆ (ಕ್ಷೌರ ಇಲ್ಲಾ).
17. ತಾಯಿ(ಕ್ಷೌರ ಇಲ್ಲಾ).
18. ಸೊಸೆ (ಕ್ಷೌರ ಇಲ್ಲಾ).
19. ತಂಗಿ ಇಲ್ಲದಿದ್ದರೆ ಅಕ್ಕ (ಕ್ಷೌರ ಇಲ್ಲಾ).
20. ತಂಗಿಯ ಮಗ ಅಥವಾ ಅಕ್ಕನ ಮಗ (ಕ್ಷೌರ ಉಂಟು).
21. ಹತ್ತು ದಿನದ ದಾಯಾದಿ (ಮೃತರು ಕರ್ತೃಗಿಂತ ಕಿರಿಯರಾದರೆ ಕ್ಷೌರ ಇಲ್ಲಾ; ಮೃತರು ಕರ್ತೃಗಿಂತ ಹಿರಿಯರಾದರೆ ಕ್ಷೌರ ಉಂಟು).
22. ತಾಯಿಯ ತಂದೆಯ ಹತ್ತು ದಿನದ ದಾಯಾದಿ(ಕ್ಷೌರ ಇಲ್ಲಾ).
23. ಮೂರು ದಿನದ ದಾಯಾದಿ (ಕ್ಷೌರ ಇಲ್ಲಾ).
24. ತನ್ನ ಗೋತ್ರದವರು (ಕ್ಷೌರ ಇಲ್ಲಾ).
25. ತನ್ನ ಶಿಷ್ಯನು (ಕ್ಷೌರ ಉಂಟು).
26. ತನ್ನ ಪುರೋಹಿತ (ಕ್ಷೌರ ಇಲ್ಲಾ).
27. ತನ್ನ ಆಚಾರ್ಯ (ಕ್ಷೌರ ಇಲ್ಲಾ).
28. ತನ್ನ ಅಳಿಯ (ಕ್ಷೌರ ಉಂಟು).
29. ತನ್ನ ಸ್ನೇಹಿತ (ಕ್ಷೌರ ಇಲ್ಲಾ).
30. ರಾಜ. ಮೊದಲು ಹೇಳಿರುವವರು ಕಾಲವಾಗಿದ್ದರೆ ಅಥವಾ ಎದುರಿನಲ್ಲಿ ಇಲ್ಲದಿದ್ದರೆ ಮುಂದಿನವರು ಕರ್ತೃಗಳಾಗುತ್ತಾರೆ.

**ಪ್ರಯೋಗ ದರ್ಪಣ –ಸಂಸ್ಕರ್ತೃ ಕ್ರಮ:**ಪುತ್ರಃ ಸಪತ್ನೀಪುತ್ರಃ ಪುತ್ರಿಕಾಪುತ್ರಃ ದತ್ತಃ ಪೌತ್ರಃ ಪ್ರಪೌತ್ರಃ ಧನಹಾರೀದೌಹಿತ್ರಃ ದೌಹಿತ್ರಃ ಪತ್ನೀ ಪತಿಃ ದುಹಿತಾ ಭ್ರಾತಾ ತತ್ಪುತ್ರಃ ಅಸೋದರಭ್ರಾತಾ ತತ್ಪುತ್ರಃ ಪಿತಾ ಮಾತಾ ಸ್ನುಷಾ ಧಾತ್ರೀ ದೌಹಿತ್ರೀ ಪೌತ್ರಸ್ಯಪತ್ನೀ ತತ್ಪುತ್ರೀ ದತ್ತಸ್ಯಪತ್ನೀ ಭಗಿನೀ ಭಾಗಿನೇಯಃ ಸಪಿಂಡಃ ಸೋದಕಃ ಮಾತೃಸಪಿಂಡಃ ಸಗೋತ್ರಃ ಶಿಷ್ಯಃ ಋತ್ವಿಕ್ ಭೃತ್ಯಃ ಗುರುಃ ಆಚಾರ್ಯಃ ಸಹಾಧ್ಯಾಯೀ ಜಾಮಾತಾ ಸಖಾ ರಾಜಾಚೇತಿ ಪೂರ್ವ ಪೂರ್ವಾಭಾವೇ ಪರಃ ಪರಃ ಕರ್ತಾ.

ಕರ್ತೃ ಕ್ರಮ (ಪ್ರಯೋಗದರ್ಪಣ): ಮರಣಹೊದಿರುವವರಿಗೆ: ಇದರ ಪ್ರಕಾರ ಮೇಲೆ ಹೇಳಿರುವವರ ಜೊತೆಗೆ ಈ ಕೆಳಗಿನವರನ್ನೂ ತಿಳಿಸಲಾಗಿದೆ. (ಕ್ರ.ಸಂ.18–ಸೊಸೆ ಆದಮೇಲೆ– ತಂಗಿ ಅಥವಾ ಅಕ್ಕನಿಗೆ ಮಧ್ಯ)

ಸಾಕಿದ ತಾಯಿ.

ಮಗಳ ಮಗಳು.

ಮೊಮ್ಮಗನ (ಮಗನ ಮಗ) ಹೆಂಡತಿ.

ಮೊಮ್ಮಗನ (ಮಗನ ಮಗ) ಮಗಳು.

ದತ್ತು ತಗೆದುಕೊಂಡಿರುವ ಮಗನ ಹೆಂಡತಿ.

(ಕ್ರ.ಸಂ.26 ಪುರೋಹಿತ ಆದಮೇಲೆ ಆಚಾರ್ಯನಿಗೆ ಮಧ್ಯೆ)

ತನ್ನ ಆಳು (ಕೆಲಸದವನು).

ತನ್ನ ಗುರುವು.

ತನ್ನಜೊತೆ ಓದಿದವನು. ಮೊದಲು ಹೇಳಿರುವವರು ಕಾಲವಾಗಿದ್ದರೆ ಅಥವಾ ಎದುರಿನಲ್ಲಿ ಇಲ್ಲದಿದ್ದರೆ ಮುಂದಿನವರು ಕರ್ತೃಗಳಾಗುತ್ತಾರೆ.

-----

**ಸಂಬಂಧಗಳು ಮತ್ತು ಅವುಗಳಿಗೆ ಸಮನಾದ ಸಂಸ್ಕೃತ ಪದಗಳು(ಸಂಕಲ್ಪದಲ್ಲಿ ಹೇಳುವುದಕ್ಕಾಗಿ ನೀಡಲಾಗಿದೆ)**

| | | |
|---|---|---|
| 1. | ತಂದೆ | ಪಿತೃ |
| 2 | ತಾಯಿ | ಮಾತೃ |
| 3 | ಹೆಂಡತಿ | ಭಾರ್ಯಾ |
| 4 | ಮಗ | ಪುತ್ರ |
| 5 | ಮಗಳು | ಪುತ್ರೀ |
| 6 | ಅಣ್ಣ | ಜ್ಯೇಷ್ಠಭ್ರಾತೃ |
| 7 | ತಮ್ಮ | ಕನಿಷ್ಠಭ್ರಾತೃ |
| 8 | ಮೊಮ್ಮಗ- ಅಂದರೆ ಮಗನ ಮಗ | ಪೌತ್ರ |
| 9 | ಮೊಮ್ಮಗಳು-ಅಂದರೆ ಮಗನ ಮಗಳು | ಪೌತ್ರೀ |
| 10 | ತಾತ-ಅಂದರೆ ತಂದೆಯ ತಂದೆ | ಪಿತಾಮಹ |
| 11 | ಅಜ್ಜಿ-ಅಂದರೆ ತಂದೆಯ ತಾಯಿ | ಪಿತಾಮಹಿ |
| 12 | ಮುತ್ತಾತ-ಅಂದರೆ ತಂದೆಯ ಕಡೆಯ ತಾತನ ತಂದೆ | ಪ್ರಪಿತಾಮಹ |
| 13 | ಮುತ್ತಜ್ಜಿ-ಅಂದರೆ ತಂದೆಯ ಕಡೆಯ ತಾತನ ತಾಯಿ | ಪ್ರಪಿತಾಮಹಿ |
| 14 | ತಾತ-ಅಂದರೆ ತಾಯಿಯ ತಂದೆ | ಮಾತಾಮಹ |
| 15 | ಅಜ್ಜಿ-ಅಂದರೆ ತಾಯಿಯ ತಾಯಿ | ಮಾತಾಮಹಿ |
| 16 | ದೊಡ್ಡಪ್ಪ-ಅಂದರೆ ತಂದೆಯ ಅಣ್ಣ | ಜ್ಯೇಷ್ಠಪಿತೃವ್ಯ |
| 17 | ಚಿಕ್ಕಪ್ಪ-ಅಂದರೆ ತಂದೆಯ ತಮ್ಮ | ಕನಿಷ್ಠಪಿತೃವ್ಯ |
| 18 | ದೊಡ್ಡಮ್ಮ ಅಥವಾ ಚಿಕ್ಕಮ್ಮ-ತಂದೆಯ ಕಡೆ | ಪಿತೃವ್ಯಪತ್ನೀ |
| 19 | ದಾಯಾದಿ- ಗಂಡಸು | ಜ್ಞಾತಿಭೂತಸ್ಯ |
| 20 | ದಾಯಾದಿ-ಹೆಂಗಸು | ಜ್ಞಾತಿಭೂತಾಯಾಃ |
| 21 | ಅಕ್ಕ | ಜ್ಯೇಷ್ಠಭಗಿನೀ |
| 22 | ತಂಗಿ | ಕನಿಷ್ಠಭಗಿನೀ |
| 23 | ಹೆಣ್ಣುಕೊಟ್ಟ ಮಾವ | ಶ್ವಶುರ |
| 24 | ಹೆಣ್ಣುಕೊಟ್ಟ ಅತ್ತೆ | ಶ್ವಶ್ರೂ |
| 25 | ಸೋದರ ಮಾವ | ಮಾತುಲ |
| 26 | ಸೋದರ ಮಾವನ ಹೆಂಡತಿ | ಮಾತುಲಾನೀ(ಮಾತುಲೀ) |
| 27 | ಅತ್ತೆ-ಅಂದರೆ ತಂದೆಯ ಅಕ್ಕ ಅಥವಾ ತಂಗಿ | ಪಿತೃಷ್ವಸೃ |
| 28 | ತಾಯಿಯ ಅಕ್ಕ ಅಥವಾ ತಂಗಿ | ಮಾತೃಷ್ವಸೃ |
| 29 | ಮೊಮ್ಮಗ-ಅಂದರೆ ಮಗಳ ಮಗ | ದೌಹಿತ್ರ |
| 30 | ಮೊಮ್ಮಗಳು-ಅಂದರೆ ಮಗಳ ಮಗಳು | ದೌಹಿತ್ರೀ |
| 31 | ಅಣ್ಣನ ಮಗಳು | ಜ್ಯೇಷ್ಠಭ್ರಾತೃಪುತ್ರೀ |
| 32 | ತಮ್ಮನ ಮಗಳು | ಕನಿಷ್ಠಭ್ರಾತೃಪುತ್ರೀ |
| 33 | ಅಕ್ಕನ ಮಗಳು | ಜ್ಯೇಷ್ಠಭಗಿನ್ಯಾಃಪುತ್ರೀ(ಭಾಗಿನೇಯೀ) |
| 34 | ತಂಗಿಯ ಮಗಳು | ಕನಿಷ್ಠಭಗಿನ್ಯಾಃಪುತ್ರೀ(ಭಾಗಿನೇಯೀ) |
| 35 | ಅಕ್ಕನ ಮಗ | ಭಾಗಿನೇಯ |
| 36 | ತಂಗಿಯ ಮಗ | ಭಾಗಿನೇಯ |

ಶ್ರೀಃ

**ಶ್ರೀಮತೇ ರಾಮಾನುಜಾಯ ನಮಃ**

## ತಿಲೋದಕ ಕ್ರಮ

**(ಯಜುರ್ವೇದ ಮತ್ತು ಸಾಮವೇದ ಕ್ರಮದಲ್ಲಿ–ಏಕೋತ್ತರವೃದ್ಧಿ ಶ್ರಾದ್ಧ)**

10 ದಿನ ಆಶೌಚ ಇರುವಾಗ 10ನೇ ದಿನ ಮಾಡುವುದು. (ಕ್ಷೌರ ಹೇಳಿರುವಲ್ಲಿ ಕ್ಷೌರವಾದ ಮೇಲೆ) 10ನೇದಿನ ಬೆಳಿಗ್ಗೆ ಸ್ನಾನ ಮಾಡಿದ ನಂತರ ಒದ್ದೆ ಬಟ್ಟಯಲ್ಲಿ ಮಾಡುವ ಕ್ರಿಯೆ. ಬೇಕಾಗುವ ಪದಾರ್ಥಗಳು:ಸ್ವಲ್ಪ ಕರೀ ಎಳ್ಳು; ಒಂದು ದರ್ಭೆಯಲ್ಲಿ ಪವಿತ್ರ, ಒಂದು ದರ್ಭಯಲ್ಲಿ ಆಯಾಮ(ಒಂದು ದರ್ಭೆಯನ್ನು 8 ಅಂಕಿಯಂತೆ ಗಂಟು ಹಾಕುವುದು); ಒಂದು ದರ್ಭೆ ಆಸನಕ್ಕೆ; ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿ (ಒಂದೇ ಬಟ್ಟೆ) ಊರ್ಧ್ವ ಪುಂಡ್ರವನ್ನುಧರಿಸಿ ಕೆಳಗೆ ಹೇಳಿರುವ ಕ್ರಮದಲ್ಲಿ ಮಾಡಬೇಕು:

ಉಪವೀತಿಯಲ್ಲಿ ಎರಡು ಆಚಮನ ಮಾಡಿ, ಒಂದು ದರ್ಭೆಯ ಪವಿತ್ರವನ್ನು ಧರಿಸಿ, ಮೂರು ಪ್ರಾಣಾಯಾಮ ಮಾಡಿ ಕೆಳಗೆ ಹೇಳಿರುವಂತೆ ಸಂಕಲ್ಪ ಮಾಡಬೇಕು:

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ಪ್ರಸನ್ನ ವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ.

ಯಸ್ಯದ್ವಿರದವಕ್ತ್ರಾದ್ಯಾಃ ಪಾರಿಷದ್ಯಾಃ ಪರಶ್ಶತಮ್ ವಿಘ್ನಂ ನಿಘ್ನಂತಿ ಸತತಂ ವಿಷ್ವಕ್ಸೇನಂ ತಮಾಶ್ರಯೇ.

ಓಮ್ ಶ್ರೀ ಗೋವಿಂದ ಗೋವಿಂದ ಗೋವಿಂದ ಅಸ್ಯಶ್ರೀಭಗವತೋ ಮಹಾಪುರುಷಸ್ಯ ಶ್ರೀವಿಷ್ಣೋರಾಜ್ಞಯಾ ಪ್ರವರ್ಧಮಾನಸ್ಯ ಆದ್ಯಬ್ರಹ್ಮಣಃ ದ್ವಿತೀಯಪರಾರ್ಧೇ ಶ್ರೀಶ್ವೇತವರಾಹ ಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭಾರತವರ್ಷೇ ಭರತಖಂಡೇ ಶಕಾಬ್ದೇ ಮೇರೋರ್ದಕ್ಷಿಣೇ ಪಾರ್ಶ್ವೇ ಅಸ್ಮಿನ್‌ವರ್ತಮಾನೇ ವ್ಯಾವಹಾರಿಕೇ ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ ______ನಾಮ ಸಂವತ್ಸರೇ _____ಅಯನೇ ____ಋತೌ ____ಮಾಸೇ ____ಪಕ್ಷೇ ___ತಿಥೌ ವಾಸರಃ ____ವಾಸರಯುಕ್ತಾಯಾಂ ____ನಕ್ಷತ್ರ ಯುಕ್ತಾಯಾಂ(ಪ್ರಚೀನಾವೀತಿ) ವಿಷ್ಣು ನಕ್ಷತ್ರ ವಿಷ್ಣು ಯೋಗ ವಿಷ್ಣು ಕರಣ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಅಸ್ಯಾಂ ____ತಿಥೌಶ್ರೀಭಗವದಾಜ್ಞಯಾ ಭಗವತ್ ಕೈಂಕರ್ಯ ರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಮ್) <u>ಅದ್ಯ ದಶಮೇಽಹನಿ</u> ಅತಿಪನ್ನ ಪ್ರಥಮದಿನಾದಾರಭ್ಯ <u>ಅದ್ಯ ದಶಮೇಽಹನಿ</u> ಪರ್ಯಂತಂ ____ ಗೋತ್ರಸ್ಯ ____ಶರ್ಮಣಃ____ ಭೂತಸ್ಯ ಪ್ರೇತಸ್ಯ(_____ಗೋತ್ರಾಯಾಃ_____ನಾಮ್ನ್ಯಾಃ____ಭೂತಾಯಾಃ ಪ್ರೇತಾಯಾಃ ಎಂದು ಸ್ತ್ರೀಯರಿಗೆ) ದಹನಜನಿತ ಕ್ಷುತ್ ತೃಷ್ಣಾದಾಹ ತಾಪೋಪಶಮನಾರ್ಥಂ ಪ್ರೇತ ಆಪ್ಯಾಯನಾರ್ಥಂ ಪ್ರೇತ ತೃಪ್ತ್ಯರ್ಥಂ <u>ಪಂಚಸಪ್ತತಿ</u> ತಿಲೋದಕ ಪ್ರದಾನಂ ಕರಿಷ್ಯೇ.

ಒಂದು ದರ್ಭೆಯನ್ನು ಪೂರ್ವಾಗ್ರವಾಗಿ ಇಟ್ಟು ಅದರಮೇಲೆ ಒಂದು ದರ್ಭೆಯ ಆಯಾಮವನ್ನು ದಕ್ಷಿಣಾಗ್ರವಾಗಿ ಇಟ್ಟು ದಕ್ಷಿಣಾಭಿಮುಖವಾಗಿ ಎಡಮಂಡಿಯನ್ನು ಊರಿಕೊಂಡು ಸ್ವಲ್ಪ ಕರೀ ಎಳ್ಳನ್ನು ತೆಗೆದುಕೋಂಡು ____ಗೋತ್ರಸ್ಯ____ಶರ್ಮಣಃ ____ಭೂತಸ್ಯ ಪ್ರೇತಮ್(____ಗೋತ್ರಾಯಾಃ____ನಾಮ್ನ್ಯಾಃ ____ ಭೂತಾಯಾಃ ಪ್ರೇತಾಮ್ ಎಂದು ಸ್ತ್ರೀಯರಿಗೆ) ಅಸ್ಮಿನ್ ಕೂರ್ಚೇ ಆವಾಹಯಾಮಿ ಎಂದು ಆಯಾಮದ ಮೇಲೆ ಎಳ್ಳು ಹಾಕಬೇಕು.

ಅತಿಪನ್ನ ಪ್ರಥಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ–ಎಂದು 3 ಸಲ ಹೇಳಿ 3 ಸಲ ತಿಲೋದಕ ಬಿಡುವುದು
ಅತಿಪನ್ನ ದ್ವಿತೀಯೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 4 ಸಲ ಹೇಳಿ 4 ಸಲ ತಿಲೋದಕ ಬಿಡುವುದು;
ಅತಿಪನ್ನ ತೃತೀಯೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 5 ಸಲ ಹೇಳಿ 5 ಸಲ ತಿಲೋದಕ ಬಿಡುವುದು
ಅತಿಪನ್ನ ಚತುರ್ಥೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 6 ಸಲ ಹೇಳಿ 6 ಸಲ ತಿಲೋದಕ ಬಿಡುವುದು
ಅತಿಪನ್ನ ಪಂಚಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 7 ಸಲ ಹೇಳಿ 7 ಸಲ ತಿಲೋದಕ ಬಿಡುವುದು
ಅತಿಪನ್ನ ಷಷ್ಠೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 8 ಸಲ ಹೇಳಿ 8 ಸಲ ತಿಲೋದಕ ಬಿಡುವುದು
ಅತಿಪನ್ನ ಸಪ್ತಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 9 ಸಲ ಹೇಳಿ 9 ಸಲ ತಿಲೋದಕ ಬಿಡುವುದು
ಅತಿಪನ್ನ ಅಷ್ಟಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 10 ಸಲ ಹೇಳಿ 10 ಸಲ ತಿಲೋದಕ ಬಿಡುವುದು
ಅತಿಪನ್ನ ನವಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 11 ಸಲ ಹೇಳಿ 11 ಸಲ ತಿಲೋದಕ ಬಿಡುವುದು
ಅದ್ಯ ದಶಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 12 ಸಲ ಹೇಳಿ 12 ಸಲ ತಿಲೋದಕ ಬಿಡುವುದು

ಒಟ್ಟು 75 ಸಲ ಆಯಾಮದ ಮೇಲೆ ತಿಲೋದಕ ಬಿಡಬೇಕು;

ನಂತರ ಎದ್ದು ನಿಂತುಕೊಂಡು____ಗೋತ್ರ ____ಶರ್ಮನ್____ಭೂತ ಪ್ರೇತ(–––ಗೋತ್ರೇ____ನಾಮ್ನೀ____ಭೂತ ಪ್ರೇತೇ ಎಂದು ಸ್ತ್ರೀಯರಿಗೆ) ಮಯಾ ದತ್ತಾನಿ ಏತತ್ ತಿಲೋದಕಾನಿ ಉಪತಿಷ್ಠ;

ನಂತರ ಜನಿವಾರವನ್ನು ಉಪವೀತಿ ಮಾಡಿಕೊಂಡು ಸೂರ್ಯನನ್ನು ನೋಡುತ್ತಾ "ನಾರಾಯಣ ನಮಸ್ತೇಸ್ತು ಶಂಖಚಕ್ರಗದಾಧರ ಅಕ್ಷಯ್ಯ ಮಯಾದತ್ತೈಃ ಏತತ್ ತಿಲೋದಕ ಪ್ರದಾನ್ಯೈಃ ಪ್ರೇತ ತೃಪ್ತಿಕರೋಭವ:

"ತೃಪ್ತೋಭವ ತೃಪ್ತೋಭವ ತೃಪ್ತೋಭವ" ಎಂದು ಗಂಡಸರಿಗೆ ಹೇಳಬೇಕು;

"ತೃಪ್ತಾಭವ ತೃಪ್ತಾಭವ ತೃಪ್ತಾಭವ" ಎಂದು ಹೆಂಗಸರಿಗೆ ಹೇಳಬೇಕು;

ನಂತರ ಉಪವೀತಿಯಲ್ಲಿ ಆ ತಿಲೋದಕ ನೀಡಿದ ಸ್ಥಳವನ್ನು ಮೂರು ಸಲ ಪ್ರದಕ್ಷಿಣೆ ಮಾಡಿ ನಂತರ ನಮಸ್ಕಾರ ಮಾಡಿ ಅಭಿವಾದನ ಮಾಡಬೇಕು; ಆವಾಹಿತ ____ಗೋತ್ರಂ____ಶರ್ಮಾಣಂ____ಪ್ರೇತಂ(–––ಗೋತ್ರಾಂ____ನಾಮ್ನೀಂ–––ಪ್ರೇತಾಂ ಹೆಂಗಸರಿಗೆ) ಯಥಾಸ್ಥಾನಂ ವಿಸರ್ಜಯಾಮಿ ಎಂದು ಆಯಾಮದ ಮೇಲೆ ಎಳ್ಳು ಹಾಕಬೇಕು. ನಂತರ ಆಸ್ಥಲವನ್ನು ನೀರಿನಿಂದ ತೊಳೆದು ನಂತರ ಸ್ನಾನ ಮಾಡಬೇಕು.

**ಶ್ರೀಃ**

**ಶ್ರೀಮತೇ ರಾಮಾನುಜಾಯ ನಮಃ**

## ತಿಲೋದಕ ಕ್ರಮ

**(ಯಜುರ್ವೇದ ಮತ್ತು ಸಾಮವೇದ ಕ್ರಮದಲ್ಲಿ–ಏಕೋತ್ತರವೃದ್ಧಿ ಶ್ರಾದ್ಧ)**

3 ದಿನ ಆಶೌಚ ಇರುವಾಗ 3ನೇ ದಿನ ಮಾಡುವುದು. (ಕ್ಷೌರ ಹೇಳಿರುವಲ್ಲಿ ಕ್ಷೌರವಾದ ಮೇಲೆ) 3ನೇದಿನ ಬೆಳಿಗ್ಗೆ ಸ್ನಾನ ಮಾಡಿದ ನಂತರ ಒದ್ದೆ ಬಟ್ಟೆಯಲ್ಲಿ ಮಾಡುವ ಕ್ರಿಯೆ. ಬೇಕಾಗುವ ಪದಾರ್ಥಗಳು:ಸ್ವಲ್ಪ ಕರೀ ಎಳ್ಳು; ಒಂದು ದರ್ಭೆಯಲ್ಲಿ ಪವಿತ್ರ, ಒಂದು ದರ್ಭೆಯಲ್ಲಿ ಆಯಾಮ(ಒಂದು ದರ್ಭೆಯನ್ನು 8 ಅಂಕಿಯಂತೆ ಗಂಟು ಹಾಕುವುದು); ಒಂದು ದರ್ಭೆ ಆಸನಕ್ಕೆ; ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿ (ಒಂದೇ ಬಟ್ಟೆ) ಊರ್ಧ್ವ ಪುಂಡ್ರವನ್ನುಧರಿಸಿ ಕೆಳಗೆ ಹೇಳಿರುವ ಕ್ರಮದಲ್ಲಿ ಮಾಡಬೇಕು:

ಉಪವೀತಿಯಲ್ಲಿ ಎರಡು ಆಚಮನ ಮಾಡಿ, ಒಂದು ದರ್ಭೆಯ ಪವಿತ್ರವನ್ನು ಧರಿಸಿ, ಮೂರು ಪ್ರಾಣಾಯಾಮ ಮಾಡಿ ಕೆಳಗೆ ಹೇಳಿರುವಂತೆ ಸಂಕಲ್ಪ ಮಾಡಬೇಕು:

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ಪ್ರಸನ್ನ ವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ.

ಯಸ್ಯದ್ವಿರದವಕ್ತ್ರಾದ್ಯಾಃ ಪಾರಿಷದ್ಯಾಃ ಪರಶ್ಶತಮ್ ವಿಘ್ನಂ ನಿಘ್ನಂತಿ ಸತತಂ ವಿಷ್ವಕ್ಸೇನಂ ತಮಾಶ್ರಯೇ.

ಓಮ್ ಶ್ರೀ ಗೋವಿಂದ ಗೋವಿಂದ ಗೋವಿಂದ ಅಸ್ಯಶ್ರೀಭಗವತೋ ಮಹಾಪುರುಷಸ್ಯ ಶ್ರೀವಿಷ್ಣೋರಾಜ್ಞಯಾ ಪ್ರವರ್ಧಮಾನಸ್ಯ ಆದ್ಯಬ್ರಹ್ಮಣಃ ದ್ವಿತೀಯಪರಾರ್ಧೇ ಶ್ರೀಶ್ವೇತವರಾಹ ಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭಾರತವರ್ಷೇ ಭರತಖಂಡೇ ಶಕಾಬ್ದೇ ಮೇರೋರ್ದಕ್ಷಿಣೇ ಪಾರ್ಶ್ವೇ ಅಸ್ಮಿನ್‌ವರ್ತಮಾನೇ ವ್ಯಾವಹಾರಿಕೇ ಪ್ರಭವಾದಿ ಷಷ್ಟಿ ಸಂವತ್ಸರಾಣಾಂ ಮಧ್ಯೇ ____ನಾಮ ಸಂವತ್ಸರೇ ____ಅಯನೇ ____ಋತೌ ____ಮಾಸೇ ____ಪಕ್ಷೇ ____ತಿಥೌ ವಾಸರಃ ____ವಾಸರಯುಕ್ತಾಯಾಂ ____ನಕ್ಷತ್ರ ಯುಕ್ತಾಯಾಂ(ಪ್ರಚೀನಾವೀತಿ) ವಿಷ್ಣು ನಕ್ಷತ್ರ ವಿಷ್ಣು ಯೋಗ ವಿಷ್ಣು ಕರಣ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಅಸ್ಯಾಂ ____ತಿಥೌಶ್ರೀಭಗವದಾಜ್ಞಯಾ ಭಗವತ್ ಕೈಂಕರ್ಯ ರೂಪಂ (ಶ್ರೀಮನ್ನಾರಾಯಣ ಪ್ರೀತ್ಯರ್ಥಮ್) <u>ಅದ್ಯ 'ತೃತೀಯೇಽಹನಿ'</u> ಅತಿಪನ್ನ ಪ್ರಥಮದಿನಾದಾರಭ್ಯ <u>ಅದ್ಯ 'ತೃತೀಯೇಽಹನಿ'</u> ಪರ್ಯಂತಂ ____ ಗೋತ್ರಸ್ಯ ____ಶರ್ಮಣಃ____ ಭೂತಸ್ಯ ಪ್ರೇತಸ್ಯ(____ಗೋತ್ರಾಯಾಃ____ನಾಮ್ನ್ಯಃ____ಭೂತಾಯಾಃ ಪ್ರೇತಾಯಾಃ ಎಂದು ಸ್ತ್ರೀಯರಿಗೆ) ದಹನಜನಿತ ಕ್ಷುತ್ ತೃಷ್ಣಾದಾಹ ತಾಪೋಪಶಮನಾರ್ಥಂ ಪ್ರೇತ ಆಪ್ಯಾಯನಾರ್ಥಂ ಪ್ರೇತ ತೃಪ್ತ್ಯರ್ಥಂ <u>ಪಂಚಸಪ್ತತಿ</u> ತಿಲೋದಕ ಪ್ರದಾನಂ ಕರಿಷ್ಯೇ.

ಒಂದು ದರ್ಭೆಯನ್ನು ಪೂರ್ವಾಗ್ರವಾಗಿ ಇಟ್ಟು ಅದರಮೇಲೆ ಒಂದು ದರ್ಭೆಯ ಆಯಾಮವನ್ನು ದಕ್ಷಿಣಾಗ್ರವಾಗಿ ಇಟ್ಟು ದಕ್ಷಿಣಾಭಿಮುಖವಾಗಿ ಎಡಮಂಡಿಯನ್ನು ಊರಿಕೊಂಡು ಸ್ವಲ್ಪ ಕರೀ ಎಳ್ಳನ್ನು ತೆಗೆದುಕೋಂಡು ____ಗೋತ್ರಸ್ಯ____ಶರ್ಮಣಃ ____ಭೂತಸ್ಯ ಪ್ರೇತಮ್(____ಗೋತ್ರಾಯಾಃ____ನಾಮ್ನ್ಯಃ ____ ಭೂತಾಯಾಃ ಪ್ರೇತಾಮ್ ಎಂದು ಸ್ತ್ರೀಯರಿಗೆ) ಅಸ್ಮಿನ್ ಕೂರ್ಚೇ ಆವಾಹಯಾಮಿ ಎಂದು ಆಯಾಮದ ಮೇಲೆ ಎಳ್ಳು ಹಾಕಬೇಕು.

ಅತಿಪನ್ನ ಪ್ರಥಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 12 ಸಲ ಹೇಳಿ 12 ಸಲ ತಿಲೋದಕ ಬಿಡುವುದು;

ಅತಿಪನ್ನ ದ್ವಿತೀಯೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 30 ಸಲ ಹೇಳಿ 30 ಸಲ ತಿಲೋದಕ ಬಿಡುವುದು;

ಅದ್ಯ ತೃತೀಯೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 33 ಸಲ ಹೇಳಿ 33 ಸಲ ತಿಲೋದಕ ಬಿಡುವುದು;

ಒಟ್ಟು 75 ಸಲ ಆಯಾಮದ ಮೇಲೆ ತಿಲೋದಕ ಬಿಡಬೇಕು;

ನಂತರ ಎದ್ದು ನಿಂತುಕೊಂಡು____ಗೋತ್ರ ____ಶರ್ಮನ್____ಭೂತ ಪ್ರೇತ(–––ಗೋತ್ರೇ____ನಾಮ್ನೀ____ಭೂತ ಪ್ರೇತೇ ಎಂದು ಸ್ತ್ರೀಯರಿಗೆ) ಮಯಾ ದತ್ತಾನಿ ಏತತ್ ತಿಲೋದಕಾನಿ ಉಪತಿಷ್ಠ;

ನಂತರ ಜನಿವಾರವನ್ನು ಉಪವೀತಿ ಮಾಡಿಕೊಂಡು ಸೂರ್ಯನನ್ನು ನೋಡುತ್ತಾ "ನಾರಾಯಣ ನಮಸ್ತೇಸ್ತು ಶಂಖಚಕ್ರಗದಾಧರ ಅಕ್ಷಯ್ಯ ಮಯಾದತ್ತೈಃ ಏತತ್ ತಿಲೋದಕ ಪ್ರದಾನೈಃ ಪ್ರೇತ ತೃಪ್ತಿಕರೋಭವ:

"ತೃಪ್ತೋಭವ ತೃಪ್ತೋಭವ ತೃಪ್ತೋಭವ" ಎಂದು ಗಂಡಸರಿಗೆ ಹೇಳಬೇಕು;

"ತೃಪ್ತಾಭವ ತೃಪ್ತಾಭವ ತೃಪ್ತಾಭವ" ಎಂದು ಹೆಂಗಸರಿಗೆ ಹೇಳಬೇಕು;

ನಂತರ ಉಪವೀತಿಯಲ್ಲಿ ಆ ತಿಲೋದಕ ನೀಡಿದ ಸ್ಥಳವನ್ನು ಮೂರು ಸಲ ಪ್ರದಕ್ಷಿಣೆ ಮಾಡಿ ನಂತರ ನಮಸ್ಕಾರ ಮಾಡಿ ಅಭಿವಾದನ ಮಾಡಬೇಕು; ಆವಾಹಿತ ____ಗೋತ್ರಂ____ಶರ್ಮಾಣಂ____ಪ್ರೇತಂ(–––ಗೋತ್ರಾಂ____ನಾಮ್ನೀಂ–––ಪ್ರೇತಾಂ ಹೆಂಗಸರಿಗೆ) ಯಥಾಸ್ಥಾನಂ ವಿಸರ್ಜಯಾಮಿ ಎಂದು ಆಯಾಮದ ಮೇಲೆ ಎಳ್ಳು ಹಾಕಬೇಕು. ನಂತರ ಆಸ್ಥಲವನ್ನು ನೀರಿನಿಂದ ತೊಳೆದು ನಂತರ ಸ್ನಾನ ಮಾಡಬೇಕು.

**ಶ್ರೀಃ**

**ಶ್ರೀಮತೇ ರಾಮಾನುಜಾಯ ನಮಃ**

## ತಿಲೋದಕ ಕ್ರಮ

**(ಋಗ್ವೇದ ಕ್ರಮದಲ್ಲಿ–ದ್ವಯೋತ್ತರವೃದ್ಧಿ ಶ್ರಾದ್ಧ)**

10 ದಿನ ಆಶೌಚ ಇರುವಾಗ 10ನೇ ದಿನ ಮಾಡುವುದು. (ಕ್ಷೌರ ಹೇಳಿರುವಲ್ಲಿ ಕ್ಷೌರವಾದ ಮೇಲೆ) 10ನೇದಿನ ಬೆಳಿಗ್ಗೆ ಸ್ನಾನ ಮಾಡಿದ ನಂತರ ಒದ್ದೆ ಬಟ್ಟೆಯಲ್ಲಿ ಮಾಡುವ ಕ್ರಿಯೆ. ಬೇಕಾಗುವ ಪದಾರ್ಥಗಳು: ಸ್ವಲ್ಪ ಕರೀ ಎಳ್ಳು; ಒಂದು ದರ್ಭೆಯಲ್ಲಿ ಪವಿತ್ರ, ಒಂದು ದರ್ಭೆಯಲ್ಲಿ ಆಯಾಮ(ಒಂದು ದರ್ಭೆಯನ್ನು 8 ಅಂಕಿಯಂತೆ ಗಂಟು ಹಾಕುವುದು); ಒಂದು ದರ್ಭೆ ಆಸನಕ್ಕೆ; ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿ (ಒಂದೇ ಬಟ್ಟೆ) ಊರ್ಧ್ವ ಪುಂಡ್ರವನ್ನು ಧರಿಸಿ ಕೆಳಗೆ ಹೇಳಿರುವ ಕ್ರಮದಲ್ಲಿ ಮಾಡಬೇಕು:

ಉಪವೀತಿಯಲ್ಲಿ ಎರಡು ಆಚಮನ ಮಾಡಿ, ಒಂದು ದರ್ಭೆಯ ಪವಿತ್ರವನ್ನು ಧರಿಸಿ, ಮೂರು ಪ್ರಾಣಾಯಾಮ ಮಾಡಿ ಕೆಳಗೆ ಹೇಳಿರುವಂತೆ ಸಂಕಲ್ಪ ಮಾಡಬೇಕು:

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ಪ್ರಸನ್ನ ವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ.

ಯಸ್ಯದ್ವಿರದವಕ್ತ್ರಾದ್ಯಾಃ ಪಾರಿಷದ್ಯಾಃ ಪರಶ್ಶತಮ್ ವಿಘ್ನಂ ನಿಘ್ನಂತಿ ಸತತಂ ವಿಷ್ವಕ್ಸೇನಂ ತಮಾಶ್ರಯೇ.

ಓಮ್ ಶ್ರೀ ಗೋವಿಂದ ಗೋವಿಂದ ಗೋವಿಂದ ಅಸ್ಯಶ್ರೀಭಗವತೋ ಮಹಾಪುರುಷಸ್ಯ ಶ್ರೀವಿಷ್ಣೋರಾಜ್ಞಯಾ ಪ್ರವರ್ಧಮಾನಸ್ಯ ಆದ್ಯಬ್ರಹ್ಮಣಃ ದ್ವಿತೀಯಪರಾರ್ಧೇ ಶ್ರೀಶ್ವೇತವರಾಹ ಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭಾರತವರ್ಷೇ ಭರತಖಂಡೇ ಶಕಾಬ್ದೇ ಮೇರೋರ್ದಕ್ಷಿಣೇ ಪಾರ್ಶ್ವೇ ಅಸ್ಮಿನ್ವರ್ತಮಾನೇ ವ್ಯಾವಹಾರಿಕೇ ಪ್ರಭವಾದಿ ಷಷ್ಟಿ ಸಂವತ್ಸರಾಣಾಂ ಮಧ್ಯೇ ______ನಾಮ ಸಂವತ್ಸರೇ _____ಅಯನೇ ____ಋತೌ ____ಮಾಸೇ ____ಪಕ್ಷೇ ___ತಿಥೌ ವಾಸರಃ ____ವಾಸರಯುಕ್ತಾಯಾಂ ____ನಕ್ಷತ್ರ ಯುಕ್ತಾಯಾಂ(ಪ್ರಚೀನಾವೀತಿ) ವಿಷ್ಣು ನಕ್ಷತ್ರ ವಿಷ್ಣು ಯೋಗ ವಿಷ್ಣು ಕರಣ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಅಸ್ಯಾಂ ____ತಿಥೌಶ್ರೀಭಗವದಾಜ್ಞಯಾ ಭಗವತ್ ಕೈಂಕರ್ಯ ರೂಪಂ(ಶ್ರೀಮನ್ನಾರಾಯಣ ಪ್ರೀತ್ಯರ್ಥಮ್) ಅದ್ಯ ದಶಮೇಽಹನಿ ಅತಿಪನ್ನ ಪ್ರಥಮದಿನಾದಾರಭ್ಯ ಅದ್ಯ ದಶಮೇಽಹನಿ ಪರ್ಯಂತಂ ____ ಗೋತ್ರಸ್ಯ ____ಶರ್ಮಣಃ____ ಭೂತಸ್ಯ ಪ್ರೇತಸ್ಯ(____ಗೋತ್ರಾಯಾಃ____ನಾಮ್ನ್ಯಾಃ___ಭೂತಾಯಾಃ ಪ್ರೇತಾಯಾಃ ಎಂದು ಸ್ತ್ರೀಯರಿಗೆ) ದಹನಜನಿತ ಕ್ಷುತ್ ತೃಷ್ಣಾದಾಹ ತಾಪೋಪಶಮನಾರ್ಥಂ ಪ್ರೇತ ಆಪ್ಯಾಯನಾರ್ಥಂ ಪ್ರೇತ ತೃಪ್ತ್ಯರ್ಥಂ ಶತ ತಿಲೋದಕ ಪ್ರದಾನಂ ಕರಿಷ್ಯೇ.

ಒಂದು ದರ್ಭೆಯನ್ನು ಪೂರ್ವಾಗ್ರವಾಗಿ ಇಟ್ಟು ಅದರಮೇಲೆ ಒಂದು ದರ್ಭೆಯ ಆಯಾಮವನ್ನು ದಕ್ಷಿಣಾಗ್ರವಾಗಿ ಇಟ್ಟು ದಕ್ಷಿಣಾಭಿಮುಖವಾಗಿ ಎಡಮಂಡಿಯನ್ನು ಊರಿಕೊಂಡು ಸ್ವಲ್ಪ ಕರೀ ಎಳ್ಳನ್ನು ತೆಗೆದುಕೋಂಡು ___ಗೋತ್ರಸ್ಯ___ಶರ್ಮಣಃ ___ಭೂತಸ್ಯ ಪ್ರೇತಮ್(___ಗೋತ್ರಾಯಾಃ___ನಾಮ್ನ್ಯಾಃ ___ ಭೂತಾಯಾಃ ಪ್ರೇತಾಮ್ ಎಂದು ಸ್ತ್ರೀಯರಿಗೆ) ಅಸ್ಮಿನ್ ಕೂರ್ಚೇ ಆವಾಹಯಾಮಿ ಎಂದು ಆಯಾಮದ ಮೇಲೆ ಎಳ್ಳು ಹಾಕಬೇಕು.

ಅತಿಪನ್ನ ಪ್ರಥಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ–ಎಂದು 1 ಸಲ ಹೇಳಿ 1 ಸಲ ತಿಲೋದಕ ಬಿಡುವುದು
ಅತಿಪನ್ನ ದ್ವಿತೀಯೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 3 ಸಲ ಹೇಳಿ 3 ಸಲ ತಿಲೋದಕ ಬಿಡುವುದು;
ಅತಿಪನ್ನ ತೃತೀಯೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 5 ಸಲ ಹೇಳಿ 5 ಸಲ ತಿಲೋದಕ ಬಿಡುವುದು
ಅತಿಪನ್ನ ಚತುರ್ಥೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 7 ಸಲ ಹೇಳಿ 7 ಸಲ ತಿಲೋದಕ ಬಿಡುವುದು
ಅತಿಪನ್ನ ಪಂಚಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 9 ಸಲ ಹೇಳಿ 9 ಸಲ ತಿಲೋದಕ ಬಿಡುವುದು
ಅತಿಪನ್ನ ಷಷ್ಠೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 11 ಸಲ ಹೇಳಿ 11 ಸಲ ತಿಲೋದಕ ಬಿಡುವುದು
ಅತಿಪನ್ನ ಸಪ್ತಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 13 ಸಲ ಹೇಳಿ 13 ಸಲ ತಿಲೋದಕ ಬಿಡುವುದು
ಅತಿಪನ್ನ ಅಷ್ಟಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 15 ಸಲ ಹೇಳಿ 15 ಸಲ ತಿಲೋದಕ ಬಿಡುವುದು
ಅತಿಪನ್ನ ನವಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 17 ಸಲ ಹೇಳಿ 17 ಸಲ ತಿಲೋದಕ ಬಿಡುವುದು
ಅದ್ಯ ದಶಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 19 ಸಲ ಹೇಳಿ 19 ಸಲ ತಿಲೋದಕ ಬಿಡುವುದು

ಒಟ್ಟು 100 ಸಲ ಆಯಾಮದ ಮೇಲೆ ತಿಲೋದಕ ಬಿಡಬೇಕು;

ನಂತರ ಎದ್ದು ನಿಂತುಕೊಂಡು___ಗೋತ್ರ ___ಶರ್ಮನ್___ಭೂತ ಪ್ರೇತ(–––ಗೋತ್ರೇ___ನಾಮ್ನೀ___ಭೂತ ಪ್ರೇತೇ ಎಂದು ಸ್ತ್ರೀಯರಿಗೆ) ಮಯಾ ದತ್ತಾನಿ ಏತತ್ ತಿಲೋದಕಾನಿ ಉಪತಿಷ್ಠ;

ನಂತರ ಜನಿವಾರವನ್ನು ಉಪವೀತಿ ಮಾಡಿಕೊಂಡು ಸೂರ್ಯನನ್ನು ನೋಡುತ್ತಾ "ನಾರಾಯಣ ನಮಸ್ತೇಸ್ತು ಶಂಖಚಕ್ರಗದಾಧರ ಅಕ್ಷಯ್ಯ ಮಯಾದತ್ತೈಃ ಏತತ್ ತಿಲೋದಕ ಪ್ರದಾನೈಃ ಪ್ರೇತ ತೃಪ್ತಿಕರೋಭವ:

"ತೃಪ್ತೋಭವ ತೃಪ್ತೋಭವ ತೃಪ್ತೋಭವ" ಎಂದು ಗಂಡಸರಿಗೆ ಹೇಳಬೇಕು;

"ತೃಪ್ತಾಭವ ತೃಪ್ತಾಭವ ತೃಪ್ತಾಭವ" ಎಂದು ಹೆಂಗಸರಿಗೆ ಹೇಳಬೇಕು;

ನಂತರ ಉಪವೀತಿಯಲ್ಲಿ ಆ ತಿಲೋದಕ ನೀಡಿದ ಸ್ಥಳವನ್ನು ಮೂರು ಸಲ ಪ್ರದಕ್ಷಿಣೆ ಮಾಡಿ ನಂತರ ನಮಸ್ಕಾರ ಮಾಡಿ ಅಭಿವಾದನ ಮಾಡಬೇಕು; ಆವಾಹಿತ ___ಗೋತ್ರಂ___ಶರ್ಮಾಣಂ___ಪ್ರೇತಂ(–––ಗೋತ್ರಾಂ___ನಾಮ್ನೀಂ–––ಪ್ರೇತಾಂ ಹೆಂಗಸರಿಗೆ) ಯಥಾಸ್ಥಾನಂ ವಿಸರ್ಜಯಾಮಿ ಎಂದು ಆಯಾಮದ ಮೇಲೆ ಎಳ್ಳು ಹಾಕಬೇಕು. ನಂತರ ಆಸ್ಥಲವನ್ನು ನೀರಿನಿಂದ ತೊಳೆದು ನಂತರ ಸ್ನಾನ ಮಾಡಬೇಕು.

**ಶ್ರೀಃ**

**ಶ್ರೀಮತೇ ರಾಮಾನುಜಾಯ ನಮಃ**

**ತಿಲೋದಕ ಕ್ರಮ**

**(ಋಗ್ವೇದ ಕ್ರಮದಲ್ಲಿ–ದ್ವಯೋತ್ತರವೃದ್ಧಿ ಶ್ರಾದ್ಧ)**

3 ದಿನ ಆಶೌಚ ಇರುವಾಗ 3ನೇ ದಿನ ಮಾಡುವುದು. (ಕ್ಷೌರ ಹೇಳಿರುವಲ್ಲಿ ಕ್ಷೌರವಾದ ಮೇಲೆ) 3ನೇದಿನ ಬೆಳಿಗ್ಗೆ ಸ್ನಾನ ಮಾಡಿದ ನಂತರ ಒದ್ದೆ ಬಟ್ಟೆಯಲ್ಲಿ ಮಾಡುವ ಕ್ರಿಯೆ. ಬೇಕಾಗುವ ಪದಾರ್ಥಗಳು: ಸ್ವಲ್ಪ ಕರೀ ಎಳ್ಳು; ಒಂದು ದರ್ಭೆಯಲ್ಲಿ ಪವಿತ್ರ, ಒಂದು ದರ್ಭೆಯಲ್ಲಿ ಆಯಾಮ(ಒಂದು ದರ್ಭೆಯನ್ನು 8 ಅಂಕಿಯಂತೆ ಗಂಟು ಹಾಕುವುದು); ಒಂದು ದರ್ಭೆ ಆಸನಕ್ಕೆ; ಸ್ನಾನ ಮಾಡಿ ಒದ್ದೆ ಬಟ್ಟೆಯಲ್ಲಿ (ಒಂದೇ ಬಟ್ಟೆ) ಊರ್ಧ್ವ ಪುಂಡ್ರವನ್ನು ಧರಿಸಿ ಕೆಳಗೆ ಹೇಳಿರುವ ಕ್ರಮದಲ್ಲಿ ಮಾಡಬೇಕು:

ಉಪವೀತಿಯಲ್ಲಿ ಎರಡು ಆಚಮನ ಮಾಡಿ, ಒಂದು ದರ್ಭೆಯ ಪವಿತ್ರವನ್ನು ಧರಿಸಿ, ಮೂರು ಪ್ರಾಣಾಯಾಮ ಮಾಡಿ ಕೆಳಗೆ ಹೇಳಿರುವಂತೆ ಸಂಕಲ್ಪ ಮಾಡಬೇಕು:

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ಪ್ರಸನ್ನ ವದನಂ ಧ್ಯಾಯೇತ್ ಸರ್ವ ವಿಘ್ನೋಪಶಾಂತಯೇ.

ಯಸ್ಯದ್ವಿರದವಕ್ತ್ರಾದ್ಯಾಃ ಪಾರಿಷದ್ಯಾಃ ಪರಶ್ಶತಮ್ ವಿಘ್ನಂ ನಿಘ್ನಂತಿ ಸತತಂ ವಿಷ್ವಕ್ಸೇನಂ ತಮಾಶ್ರಯೇ.

ಓಮ್ ಶ್ರೀ ಗೋವಿಂದ ಗೋವಿಂದ ಗೋವಿಂದ ಅಸ್ಯಶ್ರೀಭಗವತೋ ಮಹಾಪುರುಷಸ್ಯ ಶ್ರೀವಿಷ್ಣೋರಾಜ್ಞಯಾ ಪ್ರವರ್ಧಮಾನಸ್ಯ ಆದ್ಯಬ್ರಹ್ಮಣಃ ದ್ವಿತೀಯಪರಾರ್ಧೇ ಶ್ರೀಶ್ವೇತವರಾಹ ಕಲ್ಪೇ ವೈವಸ್ವತ ಮನ್ವಂತರೇ ಕಲಿಯುಗೇ ಪ್ರಥಮಪಾದೇ ಜಂಬೂದ್ವೀಪೇ ಭಾರತವರ್ಷೇ ಭರತಖಂಡೇ ಶಕಾಬ್ದೇ ಮೇರೋರ್ದಕ್ಷಿಣೇ ಪಾರ್ಶ್ವೇ ಅಸ್ಮಿನ್ವರ್ತಮಾನೇ ವ್ಯಾವಹಾರಿಕೇ ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ ______ನಾಮ ಸಂವತ್ಸರೇ _____ಅಯನೇ ____ಋತೌ ____ಮಾಸೇ ____ಪಕ್ಷೇ ___ತಿಥೌ ವಾಸರಃ ____ವಾಸರಯುಕ್ತಾಯಾಂ ____ನಕ್ಷತ್ರ ಯುಕ್ತಾಯಾಂ(ಪ್ರಚೀನಾವೀತಿ) ವಿಷ್ಣು ನಕ್ಷತ್ರ ವಿಷ್ಣು ಯೋಗ ವಿಷ್ಣು ಕರಣ ಏವಂಗುಣ ವಿಶೇಷಣ ವಿಶಿಷ್ಟಾಯಾಂ ಅಸ್ಯಾಂ ____ತಿಥೌಶ್ರೀಭಗವದಾಜ್ಞಯಾ ಭಗವತ್ ಕೈಂಕರ್ಯ ರೂಪಂ(ಶ್ರೀಮನ್ನಾರಾಯಣ ಪ್ರೀತ್ಯರ್ಥಮ್) <u>ಅದ್ಯ 'ತೃತೀಯೇಽಹನಿ'</u> ಅತಿಪನ್ನ ಪ್ರಥಮದಿನಾದಾರಭ್ಯ <u>ಅದ್ಯ 'ತೃತೀಯೇಽಹನಿ'</u> ಪರ್ಯಂತಂ ____ ಗೋತ್ರಸ್ಯ ____ಶರ್ಮಣಃ____ ಭೂತಸ್ಯ ಪ್ರೇತಸ್ಯ(____ಗೋತ್ರಾಯಾಃ____ನಾಮ್ನ್ಯಾಃ____ಭೂತಾಯಾಃ ಪ್ರೇತಾಯಾಃ ಎಂದು ಸ್ತ್ರೀಯರಿಗೆ) ದಹನಜನಿತ ಕ್ಷುತ್ ತೃಷ್ಣಾದಾಹ ತಾಪೋಪಶಮನಾರ್ಥಂ ಪ್ರೇತ ಆಪ್ಯಾಯನಾರ್ಥಂ ಪ್ರೇತ ತೃಪ್ತ್ಯರ್ಥಂ <u>ಶತ</u> ತಿಲೋದಕ ಪ್ರದಾನಂ ಕರಿಷ್ಯೇ.

ಒಂದು ದರ್ಭೆಯನ್ನು ಪೂರ್ವಾಗ್ರವಾಗಿ ಇಟ್ಟು ಅದರಮೇಲೆ ಒಂದು ದರ್ಭೆಯ ಆಯಾಮವನ್ನು ದಕ್ಷಿಣಾಗ್ರವಾಗಿ ಇಟ್ಟು ದಕ್ಷಿಣಾಭಿಮುಖವಾಗಿ ಎಡಮಂಡಿಯನ್ನು ಊರಿಕೊಂಡು ಸ್ವಲ್ಪ ಕರೀ ಎಳ್ಳನ್ನು ತೆಗೆದುಕೋಂಡು ____ಗೋತ್ರಸ್ಯ____ಶರ್ಮಣಃ ____ಭೂತಸ್ಯ ಪ್ರೇತಮ್(____ಗೋತ್ರಾಯಾಃ____ನಾಮ್ನ್ಯಾಃ ____ ಭೂತಾಯಾಃ ಪ್ರೇತಾಮ್ ಎಂದು ಸ್ತ್ರೀಯರಿಗೆ) ಅಸ್ಮಿನ್ ಕೂರ್ಚೇ ಆವಾಹಯಾಮಿ ಎಂದು ಆಯಾಮದ ಮೇಲೆ ಎಳ್ಳು ಹಾಕಬೇಕು.

ಅತಿಪನ್ನ ಪ್ರಥಮೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 9 ಸಲ ಹೇಳಿ 9 ಸಲ ತಿಲೋದಕ ಬಿಡುವುದು;

ಅತಿಪನ್ನ ದ್ವಿತೀಯೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 40 ಸಲ ಹೇಳಿ 40 ಸಲ ತಿಲೋದಕ ಬಿಡುವುದು;

ಅದ್ಯ ತೃತೀಯೇಽಹನಿ ದೇಯಂ ಏತತ್ ತಿಲೋದಕಂ ದದಾಮಿ– ಎಂದು 51 ಸಲ ಹೇಳಿ 51 ಸಲ ತಿಲೋದಕ ಬಿಡುವುದು;

ಒಟ್ಟು 100 ಸಲ ಆಯಾಮದ ಮೇಲೆ ತಿಲೋದಕ ಬಿಡಬೇಕು;

ನಂತರ ಎದ್ದು ನಿಂತುಕೊಂಡು____ಗೋತ್ರ ____ಶರ್ಮನ್____ಭೂತ ಪ್ರೇತ(---ಗೋತ್ರೇ____ನಾಮ್ನೀ____ಭೂತ ಪ್ರೇತೇ ಎಂದು ಸ್ತ್ರೀಯರಿಗೆ) ಮಯಾ ದತ್ತಾನಿ ಏತತ್ ತಿಲೋದಕಾನಿ ಉಪತಿಷ್ಠ;

ನಂತರ ಜನಿವಾರವನ್ನು ಉಪವೀತಿ ಮಾಡಿಕೊಂಡು ಸೂರ್ಯನನ್ನು ನೋಡುತ್ತಾ "ನಾರಾಯಣ ನಮಸ್ತೇಸ್ತು ಶಂಖಚಕ್ರಗದಾಧರ ಅಕ್ಷಯ್ಯ ಮಯಾದತ್ತೈಃ ಏತತ್ ತಿಲೋದಕ ಪ್ರದಾನೈಃ ಪ್ರೇತ ತೃಪ್ತಿಕರೋಭವ:

"ತೃಪ್ತೋಭವ ತೃಪ್ತೋಭವ ತೃಪ್ತೋಭವ" ಎಂದು ಗಂಡಸರಿಗೆ ಹೇಳಬೇಕು;

"ತೃಪ್ತಾಭವ ತೃಪ್ತಾಭವ ತೃಪ್ತಾಭವ" ಎಂದು ಹೆಂಗಸರಿಗೆ ಹೇಳಬೇಕು;

ನಂತರ ಉಪವೀತಿಯಲ್ಲಿ ಆ ತಿಲೋದಕ ನೀಡಿದ ಸ್ಥಳವನ್ನು ಮೂರು ಸಲ ಪ್ರದಕ್ಷಿಣೆ ಮಾಡಿ ನಂತರ ನಮಸ್ಕಾರ ಮಾಡಿ ಅಭಿವಾದನ ಮಾಡಬೇಕು; ಆವಾಹಿತ ____ಗೋತ್ರಂ____ಶರ್ಮಾಣಂ____ಪ್ರೇತಂ(---ಗೋತ್ರಾಂ____ನಾಮ್ನೀಂ---ಪ್ರೇತಾಂ ಹೆಂಗಸರಿಗೆ) ಯಥಾಸ್ಥಾನಂ ವಿಸರ್ಜಯಾಮಿ ಎಂದು ಆಯಾಮದ ಮೇಲೆ ಎಳ್ಳು ಹಾಕಬೇಕು. ನಂತರ ಆಸ್ಥಲವನ್ನು ನೀರಿನಿಂದ ತೊಳೆದು ನಂತರ ಸ್ನಾನ ಮಾಡಬೇಕು.